ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ನವೆಂಬರ್ 27, 2021


ಸಂಪುಟ : 48 ಸಂಚಿಕೆ : 196 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




# ಕೊರೊನಾ ರೂಪಾಂತರಿಗೆ ಬೆಚ್ಚಿದ ವಿಶ್ವ

**ಆಫ್ರಿಕಾದ ದಕ್ಷಿಣ ದೇಶಗಳ ಜೊತೆ ವೈಮಾನಿಕ ಸಂಪರ್ಕ ಕಡಿತ**

**ಅವಸರದಲ್ಲಿ ಅತಿಯಾಗಿ ಪ್ರತಿಕ್ರಿಯಿಸದಂತೆ ವಿಶ್ವ ಆರೋಗ್ಯ ಸಂಘಟನೆ ಕರೆ**



ಬ್ರುಸೆಲ್ಸ್, ನ. 26 – ದಕ್ಷಿಣ ಆಫ್ರಿಕಾದಲ್ಲಿ ಕೊರೊನಾದ ರೂಪಾಂತರಿ ಕಂಡು ಬಂದಿರುವುದು ವಿಶ್ವದಾದ್ಯಂತ ಪರಿಣಾಮ ಬೀರಿದ್ದು, ಹಲವಾರು ದೇಶಗಳು ಆಫ್ರಿಕಾದ ದಕ್ಷಿಣ ಭಾಗದ ದೇಶಗಳ ವೈಮಾನಿಕ ಸಂಪರ್ಕ ಕಡಿದುಕೊಂಡಿವೆ. ಏಷಿಯಾ ಹಾಗೂ ಯುರೋಪ್‌ಗಳ ಷೇರು ಮಾರುಕಟ್ಟೆಯಲ್ಲಿ ಕುಸಿತವಾಗಿದೆ.

ಹೊಸ ರೂಪಾಂತರಿ ಬಂದು ಇನ್ನಷ್ಟು ಸಮಸ್ಯೆ ಸೃಷ್ಟಿಯಾಗುವುದು ನಮಗೆ ಎಳ್ಳಷ್ಟೂ ಇಷ್ಟವಿಲ್ಲ ಎಂದು ಜರ್ಮನಿಯ ಆರೋಗ್ಯ ಸಚಿವ ಜೆನ್ಸ್ ಸ್ಪಾನ್ ಹೇಳಿದ್ದಾರೆ. 27 ದೇಶಗಳ ಯುರೋಪ್‌ನಲ್ಲಿ ಕೊರೊನಾ ಈಗಾಗಲೇ ತೀವ್ರವಾಗಿ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಯುರೋಪ್ ದೇಶಗಳು ಆಫ್ರಿಕಾದ ದಕ್ಷಿಣ ದೇಶಗಳ ಜೊತೆಗಿನ ಸಂಪರ್ಕ ಕಡಿದುಕೊಂಡಿವೆ.

ಆದರೆ, ವಿಷಯಗಳು ಸ್ಪಷ್ಟವಾಗುವುದಕ್ಕೆ ಮುಂಚೆ ಅತಿಯಾಗಿ ಪ್ರತಿಕ್ರಿಯಿಸಬಾರದು ಎಂದು ವಿಶ್ವ ಆರೋಗ್ಯ ಸಂಘಟನೆಯ ಪರಿಣಿತರು ಹೇಳಿದ್ದಾರೆ. ಇಷ್ಟಾದರೂ, ದೇಶಗಳು ಅತ್ಯಂತ ಕಳವಳದಿಂದ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ.

ಹೊಸ ರೂಪಾಂತರಿ ಡೆಲ್ಟಾಗಿಂತ ಹೆಚ್ಚು ವೇಗವಾಗಿ ಹರಡಬಹುದು ಹಾಗೂ ಈಗಿರುವ ಲಸಿಕೆಗಳು ಪರಿಣಾಮಕಾರಿಯಾಗದೇ ಇರಬಹುದು ಎಂದು ಆರಂಭಿಕ ವರದಿಗಳು ತಿಳಿಸಿವೆ. ಈ ಬಗ್ಗೆ ಹೇಳಿಕೆ ನೀಡಿರುವ ಬ್ರಿಟನ್ ಆರೋಗ್ಯ ಕಾರ್ಯದರ್ಶಿ ಸಾಜಿದ್ ಜಾವಿದ್, ನಾವು ತ್ವರಿತವಾಗಿ ಹಾಗೂ ಸಾಧ್ಯವಾದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ.

ಯುರೋಪಿನ ಬೆಲ್ಜಿಯಂನಲ್ಲಿ ಹೊಸ ರೂಪಾಂತರಿ ಕಂಡು ಬಂದಿದೆ. ವಿದೇಶದಿಂದ ಬಂದ ವ್ಯಕ್ತಿಯಲ್ಲಿ ಸೋಂಕು ಕಂಡು ಬಂದಿದೆ ಎಂದು ಅಲ್ಲಿನ ಆರೋಗ್ಯ ಸಚಿವ ಫ್ರಾಂಕ್ ವೆಂಡೆಂಬ್ರೌಕೆ ಹೇಳಿದ್ದಾರೆ.

ಅತಿ ಹೆಚ್ಚು ಲಸಿಕೆ ನೀಡಿದ ದೇಶಗಳಲ್ಲಿ ಒಂದಾದ ಇಸ್ರೇಲ್‌ನಲ್ಲೂ ಹೊಸ ರೂಪಾಂತರಿ ಕಂಡು ಬಂದಿದೆ. ಸೋಂಕಿತ ವ್ಯಕ್ತಿ ಮಲವಿಯಿಂದ ಬಂದಿರುವವರಾಗಿದ್ದಾರೆ. ಇವರ ಜೊತೆ ಇದ್ದ ಇಬ್ಬರು ಸೇರಿ ಮೂವರನ್ನು ಪ್ರತ್ಯೇಕವಾಗಿರಿಸ ಲಾಗಿದೆ. ಮೂವರೂ ಲಸಿಕೆ ಪಡೆದವರಾಗಿದ್ದಾರೆ.

ಹೊಸ ರೂಪಾಂ ತರಿಯಿಂದ ಷೇರುಪೇಟೆಗಳ ಮೇಲೆ ಪರಿಣಾಮವಾಗಿದೆ. ಯುರೋಪ್ ಹಾಗೂ ಏಷಿಯಾದ ಮಾರುಕಟ್ಟೆಗಳಲ್ಲಿ ಕುಸಿತ ಕಂಡು ಬಂದಿದೆ. ಅಮೆರಿಕದ ( 4 ನೇ

# ಭಾರತೀಯ ಸಂವಿಧಾನದಲ್ಲಿದೆ ಮಾನವೀಯ ಗುಣ: ಸಿಎಂ



ದಾವಣಗೆರೆ, ನ. 26 - ಭಾರತದ ಸಂವಿಧಾನವು ಜೀವಂತಿಕೆ ಹಾಗೂ ಮಾನವೀಯ ಗುಣಗಳುಳ್ಳ ಸಂವಿಧಾನ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

**ಸಂವಿಧಾನದ ಪ್ರಸ್ತಾವನೆ ಬೋಧಿಸಿದ ಮುಖ್ಯಮಂತ್ರಿ ಬೊಮ್ಮಾಯಿ**

ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಶುಕ್ರವಾರ 'ಸಂವಿಧಾನ ದಿನ' ಕಾರ್ಯಕ್ರಮದ ಅಂಗವಾಗಿ ಸಂವಿಧಾನದ ಪ್ರಸ್ತಾವನೆ ಬೋಧಿಸಿ ನಂತರ ಅವರು ಮಾತನಾಡಿದರು.

ಕೇವಲ ಕಾನೂನು ಮತ್ತು ಕರ್ತವ್ಯಗಳ ಬಗ್ಗೆ ಮಾತ್ರ ಮಾತನಾಡುವ ಸಂವಿಧಾನಗಳ ಪೈಕಿ ಮಾನವೀಯ ಗುಣವುಳ್ಳ ಭಾರತೀಯ ಸಂವಿಧಾನ ವಿಶೇಷವಾದದ್ದು. ದೇಶದಲ್ಲಿ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಬದಲಾವಣೆ ಗಳಿಗನುಗುಣವಾಗಿ ತಿದ್ದುಪಡಿಗೆ ಅವಕಾಶ ಕಲ್ಪಿಸುವ ಮೂಲಕ ಸಂವಿಧಾನವನ್ನು ಜೀವಂತವಾಗಿ ಇರಿಸಲಾಗಿದೆ ಎಂದು ಹೇಳಿದರು.

ಭಾರತೀಯರನ್ನು ಒಗ್ಗೂಡಿಸುವ ಜತೆಗೆ (3ನೇ ಪುಟಕ್ಕೆ)


## ಹಕ್ಕುಗಳ ಜೊತೆ ಕರ್ತವ್ಯಗಳನ್ನೂ ನಿರ್ವಹಿಸಿ

**ಯಾವ ದೇಶದಲ್ಲಿ ನಾಗರಿಕರು ಕರ್ತವ್ಯಗಳನ್ನು ಎತ್ತಿ ಹಿಡಿಯುತ್ತಾರೋ ಆ ದೇಶ ಬಲಿಷ್ಠವಾಗಿರುತ್ತದೆ. ನಾಗರಿಕರು ಕರ್ತವ್ಯ ಮರೆತಾಗ ಅರಾಜಕತೆ ಬರುತ್ತದೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಪ್ರಜೆಗಳು ಜಾಗರೂಕರಾಗಿ, ಕರ್ತವ್ಯಬದ್ಧರಾಗಿ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.**

## ಸಂವಿಧಾನದಿಂದ ಅಂತಃಕರಣ ಉಳಿದಿದೆ

**ಆಧುನೀಕರಣ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಬಂದರೂ ನಮ್ಮ ದೇಶದಲ್ಲಿನ್ನೂ ಅಂತಃಕರಣ ಉಳಿದಿದೆ ಎಂದರೆ ಅದು ಸಂವಿಧಾನದ ಬಲದಿಂದ ಮಾತ್ರ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಸಮಾಜದ ಅತಿ ಕಟ್ಟಕಡೆಯ ವ್ಯಕ್ತಿ, ಶೋಷಿತ ವರ್ಗದವರೂ ಇಂದು ತಲೆ ಎತ್ತಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವಂತಹ ಅವಕಾಶವನ್ನು ಸಂವಿಧಾನದ ಮೂಲಕ ಕಲ್ಪಿಸಲಾಗಿದೆ ಎಂದು ಹೇಳಿದರು.**

# ಕುಟುಂಬವೊಂದರ ನಿಯಂತ್ರಣಕ್ಕೆ ಪಕ್ಷ, ವ್ಯವಸ್ಥೆ ಸಿಕ್ಕಾಗ ಪ್ರಜಾಪ್ರಭುತ್ವಕ್ಕೆ ಬೆದರಿಕೆ



ನವದೆಹಲಿ, ನ. 26 - ಪಕ್ಷವೊಂದನ್ನು ಒಂದೇ ಕುಟುಂಬದ ಪೀಳಿಗೆಗಳು ಮುನ್ನಡೆಸಿದಾಗ ಹಾಗೂ ಇಡೀ ವ್ಯವಸ್ಥೆಯನ್ನು ಆ ಪಕ್ಷವೇ ನಿಯಂತ್ರಿಸಿದಾಗ ಆರೋಗ್ಯಕರ ಪ್ರಜಾ ಪ್ರಭುತ್ವಕ್ಕೆ ದೊಡ್ಡ ಬೆದರಿಕೆ ಎದುರಾಗುತ್ತದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಸಂವಿಧಾನ ದಿನಾಚರಣೆಯ ಸಂದರ್ಭದಲ್ಲಿ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಯಾರೊಬ್ಬರ ಹೆಸರು ಹೇಳದೇ ಮಾತನಾಡಿದ ಪ್ರಧಾನಿ ಮೋದಿ, ಕುಟುಂಬ ಆಧರಿತ ಪಕ್ಷಗಳು 'ಕುಟುಂಬಕ್ಕಾಗಿ ಪಕ್ಷ, ಕುಟುಂಬದ ಪಕ್ಷ' ಎಂಬ ಸೂತ್ರದಂತೆ ಕಾರ್ಯ ನಿರ್ವಹಿಸುತ್ತವೆ. ಈ ಬಗ್ಗೆ ಹೆಚ್ಚು ಹೇಳುವ ಅಗತ್ಯವಿದೆ ಎನ್ನಿಸುವುದಿಲ್ಲ ಎಂದಿದ್ದಾರೆ.

ಸರ್ಕಾರ ಸಂಸದೀಯ ಪ್ರಜಾ ಪ್ರಭುತ್ವ ಕಡೆಗಣಿಸುತ್ತಿದೆ ಎಂದು 15 ಪ್ರತಿಪಕ್ಷಗಳು ಆರೋಪಿಸಿ, ಸಮಾರಂಭದಿಂದ ದೂರ ಉಳಿದಿದ್ದವು.

ಎನ್.ಡಿ.ಎ. ಮೈತ್ರಿ ಪಕ್ಷಗಳು, ಬಿಜು ಜನತಾ ದಳ, ವೈಎಸ್‌ಆರ್ ಕಾಂಗ್ರೆಸ್, ತೆಲಂಗಾಣ ರಾಷ್ಟ್ರಪಕ್ಷ, ಬಹುಜನ ಸಮಾಜ ಪಾರ್ಟಿ ಹಾಗೂ ತೆಲುಗು ದೇಶಂ ಪಕ್ಷಗಳು ಸಮಾರಂಭದಲ್ಲಿ ಭಾಗವಹಿಸಿದ್ದವು.

ಮುಂದುವರೆದು ಮಾತನಾಡಿದ ಮೋದಿ, ಈ ಸಮಾರಂಭ ಯಾವುದೇ (4ನೇ ಪುಟಕ್ಕೆ)

# ಬೆಳೆ ಹಾನಿ; ಶೀಘ್ರವೇ ಪರಿಹಾರ: ಸಚಿವ ಭೈರತಿ

ದಾವಣಗೆರೆ, ನ.26- ಅಕಾಲಿಕ ಮಳೆ ಯಿಂದಾದ ನಷ್ಟಕ್ಕೆ ತುರ್ತು ಪರಿಹಾರ ನೀಡಲು ರಾಜ್ಯ ಸರ್ಕಾರ ಜಿಲ್ಲಾಡಳಿತಕ್ಕೆ 97 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದು, ಹಂತ, ಹಂತವಾಗಿ ಈಗಾಗಲೇ ಪರಿಹಾರ ನೀಡಲಾಗಿದೆ. ಯಾರಿಗೆ ಪರಿಹಾರ ಸಿಕ್ಕಿಲ್ಲವೋ ಅವರಿಗೆ ಶೀಘ್ರವೇ ಪರಿಹಾರ ತಲುಪಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಾಥಮಿಕ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ 90 ಕೋಟಿ ರೂ. ಮೌಲ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿಗೆ ಒಳಗಾಗಿರುವುದು ತಿಳಿದು ಬಂದಿದೆ. ಇದನ್ನು ಅಧಿಕಾರಿಗಳಿಂದ ಇನ್ನೊಮ್ಮೆ ಪರಿಶೀಲನೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿ, ಮುಖ್ಯಮಂತ್ರಿ ಜೊತೆ ಚರ್ಚಿಸಿ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡುತ್ತೇನೆ ಎಂದು ಹೇಳಿದರು.

# ಲಸಿಕೆ ಕುರಿತು ಅನುಮಾನ ವ್ಯಕ್ತಪಡಿಸಲಾಗದು : ಸುಪ್ರೀಂ

ನವದೆಹಲಿ, ನ. 26 – ಈ ಮಹತ್ವದ ಘಟ್ಟದಲ್ಲಿ ಕೊರೊನಾ ಲಸಿಕಾ ಅಭಿಯಾನದ ಕುರಿತು ಅನುಮಾನ ವ್ಯಕ್ತಪಡಿಸಲಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಜನರಿಗೆ ಲಸಿಕೆ ನೀಡದೇ ನಿರ್ಲಕ್ಷ್ಯ ತೋರಲಾಗದು ಎಂದು ತಿಳಿಸಿದೆ. ಕೋಟಿಗಟ್ಟಲೆ ಜನ ಲಸಿಕೆ ಪಡೆದಿದ್ದಾರೆ. ಸುಪ್ರೀಂ ಕೋರ್ಟ್ ಲಸಿಕೆಗಳಿಗೆ ಮಾನ್ಯತೆ ನೀಡಿದ್ದು, ಇಡೀ ವಿಶ್ವದ ಜನರೇ ಲಸಿಕೆ ಪಡೆಯುತ್ತಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಲಸಿಕೆಗಳ ಅಡ್ಡಪರಿಣಾಮಗಳಿಂದ ಜನರು ಸಾಯುತ್ತಿದ್ದಾರೆ ಎಂದು ಅಜಯ್ ಕುಮಾರ್ ಗುಪ್ತಾ ಮತ್ತಿತರರು ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ.

ಲಸಿಕೆ ನಂತರ ನಿಗಾ ವಹಿಸಲು ವ್ಯವಸ್ಥೆ ರೂಪಿಸಲಾಗಿದೆ. ಈ ಬಗ್ಗೆ ಅತೃಪ್ತಿಗಳು ಇರಬಹುದು, ಆದರೆ, ಅದರ ಆಧಾರದ ಮೇಲೆ ನೀತಿಗಳನ್ನು ಬದಲಿಸಲಾಗದು ಎಂದು ನ್ಯಾಯಾಲಯ ಹೇಳಿದೆ.

ಇಡೀ ದೇಶದ ಒಳಿತಿನ ಬಗ್ಗೆ ಯೋಚಿಸಬೇಕಿದೆ. ವಿಶ್ವ ಅಭೂತಪೂರ್ವ ಮಹಾಮಾರಿ ಎದುರಿಸುತ್ತಿದೆ, ಇಂತಹ ಪರಿಸ್ಥಿತಿಯನ್ನು ನಾವು ಯೋಚಿಸಬೇಕಿದೆ. ಜನರು ಲಸಿಕೆ ಪಡೆಯುವುದರಲ್ಲಿ ಅತಿ ಹೆಚ್ಚಿನ ರಾಷ್ಟ್ರ ಹಿತವಿದೆ ಎಂದು ನ್ಯಾಯಾಲಯ ತಿಳಿಸಿದೆ.

# ನೀತಿ ಆಯೋಗದ ಸೂಚ್ಯಂಕ

**ದಾವಣಗೆರೆ ಜಿಲ್ಲೆಯಲ್ಲಿ ಶೇ.11.71ರಷ್ಟು ಬಡವರು**

ಬೆಂಗಳೂರು, ನ. 26 – ನೀತಿ ಆಯೋಗ ರೂಪಿಸಿರುವ ಬಹು ಅಂಶಗಳ ಬಡತನ ಸೂಚ್ಯಂಕ (ಎಂ.ಪಿ.ಐ.)ದಲ್ಲಿ ಕರ್ನಾಟಕ 19ನೇ ಸ್ಥಾನದಲ್ಲಿದೆ.

ಆರೋಗ್ಯ, ಶಿಕ್ಷಣ ಹಾಗೂ ಜೀವನದ ಗುಣಮಟ್ಟವನ್ನು ಆಧರಿಸಿ ಬಡತನದ ಸೂಚ್ಯಂಕ ರೂಪಿಸಲಾಗಿದೆ. ಈ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಬಡವರ ಪ್ರಮಾಣ ಶೇ.13.16ರಷ್ಟಿದೆ.

ಕರ್ನಾಟಕದಲ್ಲೂ ಜಿಲ್ಲೆಗಳಲ್ಲಿ ಬಡತನದ ಪ್ರಮಾಣ ಏಕರೂಪವಾಗಿಲ್ಲ. ಯಾದಗಿರಿಯಲ್ಲಿ ಬಡತನದ ಪ್ರಮಾಣ ಶೇ.41.67ರಷ್ಟಿದೆ. ಬೆಂಗಳೂರಿನಲ್ಲಿ ಅತಿ ಕಡಿಮೆ ಶೇ.2.31ರಷ್ಟಿದೆ ಎಂದು ವರದಿ ತಿಳಿಸಿದೆ.

ದಾವಣಗೆರೆಯಲ್ಲಿ ಬಡವರ ಪ್ರಮಾಣ ಶೇ.11.71ರಷ್ಟಿದೆ. ಬಡತನದ ಸೂಚ್ಯಂಕದಲ್ಲಿ ದಾವಣಗೆರೆ 13ನೇ ಸ್ಥಾನದಲ್ಲಿದೆ.

ನಗರ ಹಾಗೂ ಗ್ರಾಮಾಂತರ ಭಾಗದಲ್ಲೂ ಬಡತನದಲ್ಲಿ ವ್ಯತ್ಯಾಸ ಇದೆ. ದಾವಣಗೆರೆ ಗ್ರಾಮಾಂತರದಲ್ಲಿ ಬಡವರ ಪ್ರಮಾಣ ಶೇ.16.26 ಹಾಗೂ ನಗರ ಭಾಗದಲ್ಲಿ ಬಡವರ ಪ್ರಮಾಣ ಶೇ.2.90 ಎಂದು ಸೂಚ್ಯಂಕದಲ್ಲಿ ಹೇಳಲಾಗಿದೆ. ಬಡತನ ಅತಿ ಕಡಿಮೆ ಇರುವ ಮೊದಲ ಐದು ಜಿಲ್ಲೆಗಳೆಂದರೆ ಬೆಂಗಳೂರು, ಮಂಡ್ಯ, ಹಾಸನ, ದಕ್ಷಿಣ ಕನ್ನಡ ಹಾಗೂ ಮೈಸೂರು.

ಬಡನತ ಅತಿ ಹೆಚ್ಚಾಗಿರುವ ಐದು ಜಿಲ್ಲೆಗಳೆಂದರೆ (3ನೇ ಪುಟಕ್ಕೆ)

# ಬಡವರಿಗೆ 173 ಎಕರೆ ಬಡಾವಣೆಯಲ್ಲಿ ಮನೆ

## ರವೀಂದ್ರನಾಥ್ ಕನಸು ನನಸಾಗಿಸಲು ಸಹಕಾರ : ಬಸವರಾಜ ಬೊಮ್ಮಾಯಿ



ದಾವಣಗೆರೆ, ನ. 26 - ಶಾಸಕ ಎಸ್.ಎ. ರವೀಂದ್ರನಾಥ್ ಅವರು, 173 ಎಕರೆ ಜಮೀನು ಸ್ವಾಧೀನಪಡಿಸಿಕೊಂಡು 15 ಸಾವಿರ ಜನರಿಗೆ ಮನೆ ನೀಡಬೇಕೆಂಬ ಆಶಯ ಹೊಂದಿದ್ದಾರೆ. ಅವರ ಕನಸು ನನಸಾಗಿಸಲು ಎಲ್ಲ ಸಹಕಾರ ಕೊಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

**ಎಸ್.ಎ. ರವೀಂದ್ರನಾಥ್ ಅವರ ಅಮೃತ ಮಹೋತ್ಸವ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದನೆಗಳ ಮಹಾಪೂರ, ರೈತಪರ ಹೋರಾಟದ ಸ್ಮರಣೆ**

ಎಸ್.ಎ. ರವೀಂದ್ರನಾಥ್ ಅವರ ಅಮೃತ ಮಹೋತ್ಸವ ಅಭಿನಂದನಾ ಸಮಿತಿ ಆಶ್ರಯದಲ್ಲಿ ನಗರದ ಎಸ್.ಎಸ್. ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಶಾಸಕ ರವೀಂದ್ರನಾಥ್ ಅವರ ಅಮೃತ ಮಹೋತ್ಸವ ಅಭಿನಂದನಾ ಕಾರ್ಯಕ್ರಮ ಹಾಗೂ 'ಕೃಷಿ ಕಣ್ಮಣಿ' ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ರವೀಂದ್ರನಾಥ್ ಅವರು 20 ಸಾವಿರಕ್ಕಿಂತ ಹೆಚ್ಚು ಬಡ ಜನರಿಗೆ ವಸತಿ ಕಲ್ಪಿಸುವ ಉದ್ದೇಶ ಹೊಂದಿದ್ದಾರೆ. ಬಡವರಿಗೆ ಬಡಾವಣೆ ನಿರ್ಮಿಸುವ ಬಗ್ಗೆ ನನ್ನ ಬಳಿ ವಿವರ ಕೊಟ್ಟಿದ್ದಾರೆ. ಪರಿಷತ್ ಚುನಾವಣೆಯ ನೀತಿ ಸಂಹಿತೆ ಇರುವ ಕಾರಣ ಈ ಬಗ್ಗೆ ಯಾವುದೇ ಭರವಸೆ ನೀಡುವಂತಿಲ್ಲ. ಆದರೆ, ರವೀಂದ್ರನಾಥ್ ಅವರ ಕನಸು ನನಸಾಗಿಸಲು ಎಲ್ಲ ಸಹಕಾರ ಕೊಡುತ್ತೇವೆ ಎಂದು ಬೊಮ್ಮಾಯಿ ಹೇಳಿದರು.

ರವೀಂದ್ರನಾಥ್ ಅವರು ರಾಜಕೀಯದ ಆರಂಭದ ದಿನಗಳಿಂದಲೂ ರೈತರ ಪರ ಹೋರಾಟ ಮಾಡುತ್ತಾ ಬಂದಿದ್ದಾರೆ. ಅವರ ಹೋರಾಟದಲ್ಲಿ ದಿಟ್ಟತನ - ಸ್ಪಷ್ಟತೆ ಹಾಗೂ ಅಂತಿಮ ಘಟ್ಟಕ್ಕೆ ಹೋರಾಟವನ್ನು ತೆಗೆದುಕೊಂಡು ಹೋಗುವ ( 4 ನೇ

## ಮತ್ತೆ ಚುನಾವಣೆಗೆ ನಿಲ್ಲುವುದಿಲ್ಲ ರವೀಂದ್ರನಾಥ್ ಸ್ಪಷ್ಟನೆ

ಬಿಜೆಪಿಯಲ್ಲಿ 75 ವರ್ಷ ಮೀರಿದವರಿಗೆ ಚುನಾವಣೆಯಲ್ಲಿ ಟಿಕೆಟ್ ನೀಡಬಾರದು ಎಂಬ ನಿರ್ಬಂಧವಿದೆ. ಆದರೆ, ಎಸ್.ಎ. ರವೀಂದ್ರನಾಥ್ ಅವರಿಗೆ ಮತ್ತೆ ಟಿಕೆಟ್ ನೀಡಬೇಕು. ಅವರು ಚುನಾವಣೆಯಲ್ಲಿ ಗೆದ್ದು, ಮುಂದಿನ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಸಚಿವರಾಗಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ರವೀಂದ್ರನಾಥ್ ಅವರಿಗೆ ಈಗ 76 ವರ್ಷವಾಗಿದೆ ಯಾದರೂ, ಗೆಲ್ಲುವ ವ್ಯಕ್ತಿಗೆ ಟಿಕೆಟ್ ಕೊಡುವುದೇ ಸೂಕ್ತ ಎಂದವರು ಅಭಿಪ್ರಾಯ ಪಟ್ಟರು.

ನಂತರ ಮಾತನಾಡುತ್ತಾ, ಈ ಬಗ್ಗೆ ಪ್ರತಿಕ್ರಿಯಿಸಿದ ರವೀಂದ್ರನಾಥ್, ಮುಂದಿನ ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವುದಿಲ್ಲ. ಅಧಿಕಾರದಲ್ಲಿರುವವರೆಗೂ ಕೈಲಾದಷ್ಟು ಕೆಲಸ ಮಾಡುತ್ತೇನೆ. ನಂತರದ ದಿನಗಳಲ್ಲಿ ಬಿಜೆಪಿಯನ್ನು ಇನ್ನಷ್ಟು ಬಲಿಷ್ಠಗೊಳಿಸಲು ಕೆಲಸ ಮಾಡುತ್ತೇನೆ ಎಂದರು.

# ಎಸ್.ಡಿ.ಎಂ.ಕಾಲೇಜಿನಲ್ಲಿ 182 ಜನರಿಗೆ ಕೊರೊನಾ

**ಬೆಂಗಳೂರಿನ ಶಾಲೆಯಲ್ಲಿನ ಮಕ್ಕಳು ಸೇರಿ 33 ಸೋಂಕಿತರು**

ಧಾರವಾಡ, ನ. 26 – ಇಲ್ಲಿನ ಎಸ್.ಡಿ.ಎಂ. ವೈದ್ಯಕೀಯ ಕಾಲೇಜಿನ 182 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಯಲ್ಲಿ ಕೊರೊನಾ ಸೋಂಕಿರುವುದು ಕಂಡು ಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸೋಂಕಿತರಲ್ಲಿ ಬಹುತೇಕರು ಪೂರ್ಣ ಕೊರೊನಾ ಲಸಿಕೆ ಪಡೆದ ವರಾಗಿದ್ದಾರೆ. ಕಾಲೇಜಿನಲ್ಲಿ ಇತ್ತೀಚೆಗೆ ಹೊಸಬರಿಗಾಗಿ ಕೂಟವೊಂದನ್ನು ಆಯೋಜಿಸಲಾಗಿತ್ತು. ಅದರಿಂದಲೇ ಸೋಂಕು ಹರಡಿರಬಹುದು ಎಂದು ಶಂಕಿಸಲಾಗಿದೆ.

ಲಸಿಕೆ ಪಡೆದ ನಂತರವೂ ಸೋಂಕು ಬಂದಿದೆ. ಈ ಹಿನ್ನೆಲೆಯಲ್ಲಿ, ಹೊಸ ರೂಪಾಂತರಿ ಸೋಂಕಿಗೆ ಕಾರಣವೇ ಎಂಬ ಬಗ್ಗೆ (3ನೇ ಪುಟಕ್ಕೆ)

# ಎಸ್‌ಎಸ್‌ಎಲ್‌ಸಿ ಪಠ್ಯ ಶೇ.20 ರಷ್ಟು ಕಡಿತ

ಬೆಂಗಳೂರು, ನ. 26 - ಕೊರೊನಾ ಕಾರಣದಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿ ಶೇ. 20ರಷ್ಟು ಕಡಿತಗೊಳಿಸಿದೆ.

ಕೊರೊನಾದಿಂದ ಪ್ರಸಕ್ತ ಶೈಕ್ಷಣಿಕ ವರ್ಷ ತಡವಾಗಿ ಆರಂಭವಾಗಿದೆ, ಪ್ರತಿ ವರ್ಷ ಬೋಧನೆಗೆ 240 ರಿಂದ 250 ದಿನಗಳು ಲಭ್ಯವಾಗುತ್ತಿದ್ದವು. ಆದರೆ, ಈ ವರ್ಷ 140ಕ್ಕೂ ಕಡಿಮೆ ದಿನಗಳು ಸಿಕ್ಕಿವೆ.

ದೊರೆತಿರುವ ಈ ಅವಧಿಯಲ್ಲೇ ಶಿಕ್ಷಕರು, ಪೂರ್ಣ ಪ್ರಮಾಣದ ಪಠ್ಯ ಪೂರೈಸಲು ಸಾಧ್ಯವಿಲ್ಲ ಹಾಗೂ ವಿದ್ಯಾರ್ಥಿಗಳು ಪಠ್ಯಕ್ರಮವನ್ನು ಸಂಪೂರ್ಣವಾಗಿ ಅಭ್ಯಸಿಸಲು ಸಾಧ್ಯವಿಲ್ಲ.

ಇದನ್ನು ಗಮನದಲ್ಲಿಟ್ಟುಕೊಂಡು ಇಲಾಖೆ ಮುಂಜಾಗ್ರತೆಯಾಗಿ ಶೇಕಡ 20 ರಷ್ಟು ಪಠ್ಯ ಕಡಿತ ಮಾಡಿದೆ. ಪಠ್ಯಗಳಲ್ಲಿ (2ನೇ ಪುಟಕ್ಕೆ)

# ಬಸ್ ಬಾಗಿಲಲ್ಲಿ ಸಿಲುಕಿದ ವಿದ್ಯಾರ್ಥಿ : ತುಂಡಾದ ಐದೂ ಕಾಲ್ಬೆರಳು



ದಾವಣಗೆರೆ, ನ.26- ಕೆಎಸ್‌ಆರ್‌ಟಿಸಿ ನಗರ ಸಾರಿಗೆ ಬಸ್ ನಲ್ಲಿ ಪ್ರಯಾಣಿಸುವಾಗ ಡಿಪ್ಲೋಮಾ ವಿದ್ಯಾರ್ಥಿ ಕಾಲು ಬಸ್ ಬಾಗಿಲಿನಲ್ಲಿ ಸಿಲುಕಿಕೊಂಡು ಎಡಗಾಲಿನ ಐದೂ ಬೆರಳು ತುಂಡಾದ ಘಟನೆ ನಗರದ ಪಿಬಿ ರಸ್ತೆಯ ಡಿಸಿಎಂ ಮೇಲ್ಸೇತುವೆ ಬಳಿ ಶುಕ್ರವಾರ ನಡೆದಿದೆ. ವಿವೇಕಾನಂದ ಬಡಾವಣೆಯ ಮೊದಲ ವರ್ಷದ ಡಿಪ್ಲೋಮಾ ಓದುತ್ತಿರುವ ಎನ್.ಎಸ್.ಶರತ್‌ಗೌಡ (17) ತೀವ್ರ ಗಾಯಗೊಂಡ ವಿದ್ಯಾರ್ಥಿ. (3ನೇ ಪುಟಕ್ಕೆ)

# ಬೆಂಗಳೂರಿನಲ್ಲಿ ಲಘು ಭೂಕಂಪ

ಬೆಂಗಳೂರು, ನ. 26 - ಬೆಂಗಳೂರು ನಗರ ಸೇರಿದಂತೆ ಹಳೆ ಮೈಸೂರು ಭಾಗದಲ್ಲಿ ಲಘು ಭೂಕಂಪನ ಇಂದು ಸಂಭವಿಸಿದ್ದು ಯಾವುದೇ ಆಸ್ತಿ-ಪಾಸ್ತಿ ಹಾಗೂ ಪ್ರಾಣ ಹಾನಿಯ ವರದಿ ಇಲ್ಲ.

ಬೆಳಗ್ಗೆ 11-50 ರಿಂದ ಮಧ್ಯಾಹ್ನ 12-15ರ ನಡುವೆ ನಗರದ ಕಗ್ಗಲೀಪುರ, ರಾಜರಾಜೇಶ್ವರಿ ನಗರ, ಹೆಮ್ಮಿಗೆಪುರ, ಕೆಂಗೇರಿ ಪ್ರದೇಶಗಳಲ್ಲಿ ಭೂಮಿ ಕಂಪಿಸಿದ್ದು, ಮನೆಗಳ ಕಿಟಕಿ, ಬಾಗಿಲುಗಳು ಅಲುಗಾಡಿದ ಅನುಭವ ಆಗಿದ್ದಾಗಿ ಸ್ಥಳೀಯರು ಹೇಳುತ್ತಿರುವುದು ಭೂಕಂಪನ ಶಾಸ್ತ್ರ ಇಲಾಖೆಯ ಗಮನಕ್ಕೆ ಬಂದಿತು.

ರಾಮನಗರ ಮತ್ತು ಮಂಡ್ಯದಲ್ಲಿ ಇದೇ ವೇಳೆಗೆ (2ನೇ ಪುಟಕ್ಕೆ)

# ಎಂಎಸ್‌ಪಿ ಕಾಯ್ದೆ ಜಾರಿಗಾಗಿ ಆಗ್ರಹಿಸಿ ರೈತ ಸಂಘಟನೆ ಪ್ರತಿಭಟನೆ




ಜಗಳೂರು

ಜಗಳೂರು, ನ. 26- ಎಂಎಸ್‌ಪಿ ಕಾಯ್ದೆ ಜಾರಿಗಾಗಿ ಮತ್ತು ಮೆಕ್ಕೆಜೋಳ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.


ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು, ಮಹಾತ್ಮ ಗಾಂಧಿ ವೃತ್ತದಿಂದ ಅಂಬೇಡ್ಕರ್ ವೃತ್ತದ ಮೂಲಕ ಆಡಳಿತ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ, ತಹಶೀಲ್ದಾರ್ ಕಛೇರಿ ಮುಂಭಾಗ ಜಮಾಯಿಸಿ ತಹಶೀಲ್ದಾರ್ ಶಶಿಧರ್ ಅವರಿಗೆ ಮನವಿ ಸಲ್ಲಿಸಿದರು.

ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿರಂಜೀವಿ ಮಾತನಾಡಿ, ರೈತ ಚಳುವಳಿಯ ಅಹವಾಲಿಗೆ ಸ್ಪಂದಿಸಿ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ಹಿಂಪಡೆಯಲು ನಿರ್ಧರಿಸಿರುವುದು ಸ್ವಾಗತಾರ್ಹ. ಕರಾಳ ಕಾಯ್ದೆಗಳು ಸಂಸತ್ತಿನಲ್ಲಿ ಅಂಗೀಕಾರವಾಗಿದ್ದು, ಅನೂರ್ಜಿತ ಗೊಳಿಸುವ ಮಸೂದೆಯನ್ನು ಮಂಡಿಸಿ ಪುನಃ ಸಂಸತ್ತಿನಲ್ಲಿ ಅಂಗೀಕರಿಸಿ ರಾಷ್ಟ್ರ ಪತಿಯಿಂದ ಅಂಕಿತ ಹಾಕಿಸಿ ಹಿಂಪಡೆಯುವ ಪ್ರಕ್ರಿಯೆ ಮುಕ್ತಾಯಗೊಳಿಸಬೇಕು ಎಂದರು.

ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಾಜು ಮಾತನಾಡಿ, ದೇಶದಲ್ಲಿ ಮೆಕ್ಕೆಜೋಳದ ಬೆಲೆ ಏಕರೂಪವಾಗಿದ್ದು, ಖರೀದಿದಾರರು ಬೇಕಾಬಿಟ್ಟಿ ದರದಲ್ಲಿ ಖರೀದಿಸಿ ಮನಬಂದಂತೆ ವ್ಯಾಪಾರ ನಡೆಸುತ್ತಾರೆ. ಇದನ್ನು ಶಿಕ್ಷಾರ್ಹ ಅಪರಾಧವೆಂದು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ಸರ್ಕಾರ ಕಾನೂನು ಶಿಕ್ಷೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ಪದಾಧಿಕಾರಿಗಳಾದ ಗಂಗಾಧರಪ್ಪ, ಕೆಂಚಪ್ಪ, ಶರಣಪ್ಪ, ಬೋರಣ್ಣ, ಏಕಾಂತಪ್ಪ, ಹುಸೇನ್ ಪೀರ್, ತಿಪ್ಪೇಸ್ವಾಮಿ, ನಾಗರಾಜ್, ಅಜ್ಜಪ್ಪ, ಪರುಸಪ್ಪ, ಅಂಜಿನಪ್ಪ, ಬಸಣ್ಣ, ರಂಗಪ್ಪ, ಹನುಮಂತಪ್ಪ, ಕುಮಾರ್, ಶಾಂತಕುಮಾರ್ ಮುಂತಾದವರು ಭಾಗವಹಿಸಿದ್ದರು.

# ಮಲೇಬೆನ್ನೂರಿಗಿಂದು ಗದ್ದಿಗೆಪ್ಪಜ್ಜಯ್ಯ



ತಿಪಟೂರು ತಾಲ್ಲೂಕು ಕುರುಬರಹಳ್ಳಿಯ ಜಂಗಮ ಕ್ಷೇತ್ರದ ಶ್ರೀ ಸದ್ಗುರು ಗದ್ದಿಗೆಪ್ಪಜ್ಜಯ್ಯ ಮಹಾಸ್ವಾಮೀಜಿ ಅವರು ಇಂದು ಮಧ್ಯಾಹ್ನ 3 ಗಂಟೆಗೆ ಮಲೇಬೆನ್ನೂರು ಪಟ್ಟಣದ ಪುರ ಪ್ರವೇಶ ಮಾಡಲಿದ್ದು, ನೀರಾವರಿ ಇಲಾಖೆ ಕಚೇರಿ ಮುಂಭಾಗದಿಂದ ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ಸ್ವಾಗತಿಸಲಾಗುವುದು.

ಇಂದು ಸಂಜೆ 4.30 ರಿಂದ ಮೈಸೂರಿನ ರಘುಲೀಲಾ ಸ್ಕೂಲ್ ಆಫ್ ಮ್ಯೂಸಿಕ್ ಇವರಿಂದ ಸಂಕೀರ್ತನಾ ಕಾರ್ಯಕ್ರಮವನ್ನು ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಭಾನುವಾರ ಬೆಳಿಗ್ಗೆ 8 ಗಂಟೆಗೆ ದೇವಸ್ಥಾನದಲ್ಲಿ ರುದ್ರಾಭಿಷೇಕ ಪೂಜೆಯನ್ನು ಹೊಸರಿತ್ತಿಯ ಶ್ರೀ ಗುದ್ದಲಿ ಶಿವಯೋಗೀಶ್ವರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದ್ದು, ಅಂದು ಸಂಜೆ 6.30 ರಿಂದ ಕುಮಾರಿ ಸೂರ್ಯಗಾಯತ್ರಿ ಇವರಿಂದ ಸಂಗೀತ ಉತ್ಸವ ನಡೆಯಲಿದೆ ಎಂದು ದೇವಸ್ಥಾನದ ಉಪಾಧ್ಯಕ್ಷ ಬಿ.ಚಿದಾನಂದಪ್ಪ ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ ಪಠ್ಯ ಶೇ.20 ರಷ್ಟು ಕಡಿತ

(1ನೇ ಪುಟದಿಂದ) ಯಾವ ಭಾಗಗಳನ್ನು ಕಡಿತ ಮಾಡಲಾಗಿದೆ ಎಂಬ ಬಗ್ಗೆ ಇಲಾಖೆ, ಶಾಲೆಗಳಿಗೆ ಪ್ರತ್ಯೇಕವಾಗಿ ಮಾಹಿತಿ ರವಾನಿಸಲಿದೆ. ಇದೇ ಮಾನದಂಡವನ್ನು ಉಳಿದ ಪ್ರಾಥಮಿಕ ಮತ್ತು ಪ್ರೌಢ ತರಗತಿಗಳಿಗೂ ಜಾರಿಗೊಳಿಸುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ನಿಗದಿತ ಸಮಯದಲ್ಲಿ ಪಠ್ಯ ಪುಸ್ತಕಗಳು ಲಭ್ಯವಿದ್ದರೂ, ಕಾಲಮಿತಿಯೊಳಗೆ ಶಾಲೆಗಳು ಆರಂಭವಾಗದಿದ್ದರಿಂದ ವಿದ್ಯಾರ್ಥಿಗಳ ಮೇಲೆ ಹೊರೆ ಹೇರದಿರಲು ತೀರ್ಮಾನಿಸಿದೆ. ಕಳೆದ ವರ್ಷ ಬಹುತೇಕ ಶಾಲಾ-ಕಾಲೇಜುಗಳು ಆರಂಭಗೊಳ್ಳಲಿಲ್ಲ.

## ಶ್ರೀಮತಿ ಹಿರಿಯಮ್ಮ ನಿಧನ



ದಾವಣಗೆರೆ ಹೊಸ ಕುಂದುವಾಡ ಎಸ್‌.ಟಿ. ಕಾಲೋನಿ ವಾಸಿ ಕಾಡಮ್ಮರ ತಿಪ್ಪಣ್ಣನವರ ಧರ್ಮಪತ್ನಿ ಹಿರಿಯಮ್ಮ (67) ಅವರು ದಿನಾಂಕ 26.11.2021 ರ ಶುಕ್ರವಾರ ಸಂಜೆ 6 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.11.2021ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಹೊಸ ಕುಂದುವಾಡದಲ್ಲಿ ನೆರವೇರಿಸಲಾಗುವುದು.

## ಬೆಂಗಳೂರಿನಲ್ಲಿ ಲಘು ಭೂಕಂಪ

(1ನೇ ಪುಟದಿಂದ) ಶಬ್ದ ಕೇಳಿ ಬಂದಿತು, ಆದರೆ ಭೂಕಂಪನದ ಅನುಭವ ಆಗಿಲ್ಲ. ಭೂಕಂಪನ ಸಂಭವಿಸಿದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿದಾಗ ಭೂಕಂಪನ ಮಾಪನದಲ್ಲಿ ಭೂಕಂಪನ ಸಂಭವಿಸಿದ ಲಕ್ಷಣಗಳು ದಾಖಲಾಗಿರಲಿಲ್ಲ ಎಂದು ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ಹಾನಿ ನಿರ್ವಹಣಾ ಕೇಂದ್ರದ ನಿರ್ದೇಶಕರು ಪತ್ರಿಕಾ ಹೇಳಿಕೆಯಲ್ಲಿ ಖಚಿತಪಡಿಸಿದ್ದಾರೆ.

# ಸಂವಿಧಾನದ ಆಶೋತ್ತರಗಳಿಗೆ ಧಕ್ಕೆ ಬಾರದಂತೆ ಜಾಗೃತಿ ವಹಿಸಿ

ಹರಿಹರ, ನ. 26 - ಸಂವಿಧಾನ ಪರಿಪಾಲನೆ ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಆರ್. ಯಶವಂತ್ ಕುಮಾರ್ ಹೇಳಿದ್ದಾರೆ.

ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಗರದ ಮರಿಯಾ ನಿವಾಸ ಶಾಲೆಯಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಸಂದರ್ಭದಲ್ಲಿ ಸಂವಿಧಾನದ ಆಶೋತ್ತರಗಳಿಗೆ ಧಕ್ಕೆ ಬಾರದಂತೆ ನಾವೆಲ್ಲಾ ಜಾಗೃತಿ ವಹಿಸಬೇಕಿದೆ ಎಂದು ಅವರು ಕರೆ ನೀಡಿದರು.

ನಮ್ಮೆಲ್ಲ ಹಕ್ಕುಗಳ ಮೂಲ ಸಂವಿಧಾನ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲದೆ ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ ಸ್ವಾತಂತ್ರ್ಯವನ್ನು ನಾವು ಸಂವಿಧಾನದ ಮೂಲಕ ಪಡೆದಿದ್ದೇವೆ. ಆದ್ದರಿಂದ ಸಂವಿಧಾನವನ್ನು ಓದಿಕೊಂಡು ಅದರಂತೆ ನಡೆದುಕೊಳ್ಳುವ ಮೂಲಕ ಈ ದೇಶದ ಘನತೆ, ಗೌರವ ಹೆಚ್ಚಿಸುವುದು ಎಲ್ಲರ ಜವಾಬ್ದಾರಿ ಎಂದರು.



ಹರಿಹರದ ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಯಶವಂತ ಕುಮಾರ್

ಎಪಿಪಿ ಪ್ರವೀಣ್ ಕುಮಾರ್ ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲೇ ದೇಶಾಭಿಮಾನ ಬೆಳೆಸುವಂತಹ ಚಟುವಟಿಕೆ, ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದರು.

ವಕೀಲರಾದ ಶುಭಾ ಮಾತನಾಡಿ, ಸಂವಿಧಾನದ ಕರಡು ಸಮಿತಿಯ ಅಪಾರ ಪರಿಶ್ರಮದಿಂದ ಸಂವಿಧಾನ ರಚನೆಯಾಗಿದೆ. ಇದಕ್ಕೆ ಪೂರಕವಾಗಿ ಪ್ರತಿಯೊಬ್ಬರೂ ಸೌಹಾರ್ದತೆಯಿಂದ ಜೀವಿಸಲು ಕಲಿಯಬೇಕು ಎಂದರು.


ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ.ಸಿದ್ದಪ್ಪ ಮಾತನಾಡಿ, ವಿದ್ಯಾರ್ಥಿ ಬದುಕು ಜೀವನ ಕಲೆ ಕಲಿಯುವಂತಹ ವಯಸ್ಸು. ಈ ಹಂತದಲ್ಲಿ ನಾವು ಏನನ್ನು ಕಲಿಯುತ್ತೇವೆಯೋ ಅವುಗಳೇ ಮುಂದಿನ ಜೀವನಕ್ಕೆ ಮಾರ್ಗದರ್ಶನವಾಗುತ್ತವೆ. ಆದ್ದರಿಂದ ಮಕ್ಕಳು ಸಂವಿಧಾನದ ಪೀಠಿಕೆಯ ಸಾರಾಂಶವನ್ನು ಅರ್ಥೈಸಿಕೊಂಡು, ಅಳವಡಿಸಿಕೊಳ್ಳಬೇಕೆಂದರು.

ಮರಿಯಾ ನಿವಾಸ ಶಾಲೆಯ ವ್ಯವಸ್ಥಾಪಕ ಫಾದರ್ ಡಾ.ಅಂತೋಣಿ ಪೀಟರ್ ಮಾತನಾಡಿ, ಮಕ್ಕಳ ಪಾಠ, ಪ್ರವಚನಗಳ ಜೊತೆಯಲ್ಲಿ ಭಾರತದ ಸಂವಿಧಾನದ ಪರಿಚಯ ಮಾಡಿಕೊಡುವ ಇಂತಹ ಕಾರ್ಯಕ್ರಮಗಳು ಮಕ್ಕಳಿಗೆ ಅತ್ಯಂತ ಪ್ರಯೋಜನಕಾರಿ ಎಂದರು.

ವಕೀಲರ ಸಂಘದ ಅಧ್ಯಕ್ಷ ಪಿ. ರುದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ರಾಜಶೇಖರ್ ಸಂವಿಧಾನದ ಪೀಠಿಕೆಯನ್ನು ವಾಚಿಸಿ, ಪ್ರಮಾಣ ವಾಚನ ಬೋಧಿಸಿದರು. ಮುಖ್ಯ ಶಿಕ್ಷಕಿ ಸಿಸ್ಟರ್ ಎಲಿಜಬೆತ್ ಜಯಮೇರಿ, ಸಿಸ್ಟರ್ ಪ್ರೀತಿ, ಶಿಕ್ಷಕರಾದ ನಂದಕುಮಾರಿ, ವರ್ಜಿನಿಯ ಮೇರಿ, ಥಾಮಸ್, ಡಾ.ಫ್ರಾನ್ಸಿಸ್ ಉಪಸ್ಥಿತರಿದ್ದರು.

# ಪುಟ್ಟಪರ್ತಿ ಸಾಯಿ ಬಾಬಾರ ಸಾಧನೆ ಅಪಾರ

## ಶ್ರೀ ಸತ್ಯಸಾಯಿ ಬಾಬಾರ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಎಸ್ಪಿ ರಿಷ್ಯಂತ್



ದಾವಣಗೆರೆ, ನ. 26- ಪುಟ್ಟಪರ್ತಿಯ ಶ್ರೀ ಸತ್ಯಸಾಯಿ ಬಾಬಾರವರು ಕೇವಲ ಅಧ್ಯಾತ್ಮಿಕ ಕ್ಷೇತ್ರದಲ್ಲಷ್ಟೇ ಅಲ್ಲ, ಶಿಕ್ಷಣ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲೂ ಅಪಾರ ಸಾಧನೆ ಮಾಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಶ್ರೀ ಸತ್ಯಸಾಯಿ ಸೇವಾ ಸಮಿತಿಯು ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ 96ನೇ ಜನ್ಮ ದಿನೋತ್ಸವದ ಪ್ರಯುಕ್ತ ಶ್ರೀ ಸತ್ಯಸಾಯಿ ಸೇವಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾವು ಅವರ ಶಿಕ್ಷಣ ಸಂಸ್ಥೆಗಳನ್ನು ಮತ್ತು ಆಸ್ಪತ್ರೆಗಳನ್ನು ನೋಡಿದ್ದೇನೆ. ಶಿಕ್ಷಣದಲ್ಲಿ ಶಿಸ್ತು ಮತ್ತು ಮೌಲ್ಯಗಳನ್ನು ಅಲ್ಲಿ ಅತ್ಯುತ್ತಮವಾಗಿ ಕಲಿಸಲಾಗುತ್ತದೆ ಎಂದು ಅವರು ಶ್ಲಾಘಿಸಿದರು.

ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ಮಾತನಾಡಿ, ಸಮಾಜ ಸೇವೆ ಹಾಗೂ ಮಾನವೀಯತೆಗೆ ಸಂಬಂಧಿಸಿದಂತೆ ವಿಶ್ವಕ್ಕೇ ಮಾದರಿಯಾದ ಕಾರ್ಯಗಳನ್ನು ಬಾಬಾ ಮಾಡಿದ್ದಾರೆ ಎಂದು ತಿಳಿಸಿದರು.

ಈ ಕಾರ್ಯಕ್ರಮದ ನಂತರ ನಡೆದ ವಿಶೇಷ ಸಮಾರಂಭದಲ್ಲಿ ಬಾಬಾರವರ ಬಗ್ಗೆ ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ರಾಜ್ಯ ಸಂಯೋಜಕ ಜಗನ್ನಾಥ ನಾಡಿಗೇರ್ ಮಾತನಾಡಿದರು. ಈ ಸಂದರ್ಭದಲ್ಲಿ ಭಜನೆ, ಪಲ್ಲಕ್ಕಿ ಉತ್ಸವ ಮತ್ತು ಜೂಲೋತ್ಸವಗಳು ನಡೆದವು.

ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ಜಿಲ್ಲೆಯ ಜಿಲ್ಲಾಧ್ಯಕ್ಷ ಪ್ರಶಾಂತ್ ಎಸ್.ಕುಮಾರ್, ಜಿಲ್ಲಾ ಸಂಯೋಜಕರಾದ ಬಿ.ಎನ್.ಸಾಯಿ ಪ್ರಸಾದ್, ಕಿರಣ್ ಎಸ್.ರಾಯ್ಕರ್, ಶ್ರೀ ಸತ್ಯಸಾಯಿ ಸೇವಾ ಸಮಿತಿಯ ಸಂಚಾಲಕ ಭೋಜರಾಜ್ ಎಲ್. ದೈವಜ್ಞ, ವೆಂಕಟ ಸುಬ್ಬಾ ರಾವ್, ಗುರುರಾಜ್, ಸತ್ಯನಾರಾಯಣ ಉಪಸ್ಥಿತರಿದ್ದರು.

# ಅಕಾಲಿಕ ಮಳೆಯಿಂದ ರೈತರ ಬೆಳೆಗಳಿಗೆ ಹಾನಿ : ಪರಿಹಾರಕ್ಕೆ ಆಗ್ರಹ



ಹರಪನಹಳ್ಳಿ

ಹರಪನಹಳ್ಳಿ, ನ.26 - ತಾಲ್ಲೂಕಿನಲ್ಲಿ ಈಚೆಗೆ ಸುರಿದ ಅಕಾಲಿಕ ಮಳೆಯಿಂದಾಗಿ ಹಾನಿಯಾಗಿರುವ ರೈತರ ಬೆಳೆಗಳಿಗೆ ತಕ್ಷಣ ಪರಿಹಾರ ನೀಡುವಂತೆ, ಪ್ರಗತಿಪರ ಸಂಘಟನೆ ಮುಖಂಡರು ಗುರುವಾರ ಬೆಳೆ ಹಾನಿ ಪರಿಶೀಲಿಸಲು ಪಟ್ಟಣಕ್ಕೆ ಆಗಮಿಸಿದ್ದ ಜಿಲ್ಲಾಧಿಕಾರಿ ಅನಿರುದ್ಧ ಪಿ.ಶ್ರವಣ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಸಂಘಟನೆ ಮುಖಂಡರು, ಹರಪನಹಳ್ಳಿ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ಬಡವರು ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸವಾಗಿರುವ ತಾಲ್ಲೂಕಿನಲ್ಲಿ ಮಳೆ ಆಶ್ರಿತ ಪ್ರದೇಶಕ್ಕೆ ಹೊಂದಿಕೊಂಡಿರುವ ರೈತ ಕುಟುಂಬಗಳಿದ್ದು, ಈಚೆಗೆ ಸುರಿದ ತೀವ್ರ ಮಳೆಯಿಂದಾಗಿ ಹೆಚ್ಚು ಬೆಳೆ ನಷ್ಟವಾಗಿದೆ. ಕೂಡಲೇ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ತಾಲೂಕಿನಲ್ಲಿ 5 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ಹಲವು ಕುಟುಂಬಸ್ಥರ ಬಿಪಿಎಲ್ ಪಡಿತರ ಚೀಟಿಯನ್ನು ರದ್ದುಗೊಳಿಸಿದ್ದು, ತಕ್ಷಣ ರದ್ದುಗೊಳಿಸಿರುವ ಕ್ರಮವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಯ ಮುಖಂಡರಾದ ಹೊಸಳ್ಳಿ ಮಲ್ಲೇಶ್, ನಿಚ್ಚವ್ವನಹಳ್ಳಿ ಭೀಮಪ್ಪ,ಕಲ್ಲಹಳ್ಳಿ ಗೋಣೇಪ್ಪ, ಗುಡಿಹಳ್ಳಿ ಹಾಲೇಶ್, ಎಚ್.ವೆಂಕಟೇಶ್, ಭೀಮಪ್ಪ, ಹುಲಿಕಟ್ಟಿ ರಾಜಪ್ಪ, ಗಿಡ್ಡಳ್ಳಿ ಕೊಟ್ರೇಶ್ ಸೇರಿದಂತೆ ಇತರರು ಇದ್ದರು.

# ರಾಷ್ಟ್ರಮಟ್ಟದ ಖೋ ಖೋ ಸ್ಪರ್ಧೆಗೆ ಜಿಲ್ಲೆಯ ಕ್ರೀಡಾಪಟುಗಳ ಆಯ್ಕೆ

ದಾವಣಗೆರೆ, ನ. 26- ಹಿಮಾಚಲ ಪ್ರದೇಶದ ಹುನಾದಲ್ಲಿ ಇದೇ 27 ರಿಂದ ಡಿಸೆಂಬರ್ 1 ರವರೆಗೆ ನಡೆಯುವ 31ನೇ ರಾಷ್ಟ್ರಮಟ್ಟದ ಸಬ್ ಜ್ಯೂನಿಯರ್ ಖೋ-ಖೋ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಕರ್ನಾಟಕ ರಾಜ್ಯ ತಂಡಕ್ಕೆ ದಾವಣಗೆರೆ ಕ್ರೀಡಾ ವಸತಿ ಶಾಲೆಯ ಕ್ರೀಡಾಪಟುಗಳಾದ ಪುನೀತ್ ಭೋವಿ, ಪ್ರಕಾಶ್ ಮಾದರ್ ಮತ್ತು ಸಮರ್ಥ ಇವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಮೊನ್ನೆ ನಡೆದ ರಾಜ್ಯ ತಂಡದ ಪೂರ್ವಭಾವಿ ತರಬೇತಿ ಶಿಬಿರದಲ್ಲಿ ಭಾಗವಹಿಸಿ ತರಬೇತಿ ಪಡೆದು, ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

# ಎಸ್.ಎಂ. ಲತಾಗೆ ಪಿಹೆಚ್‌ಡಿ ಪದವಿ



ದಾವಣಗೆರೆ,ನ.26- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಎಸ್. ಎಂ. ಲತಾ ಅವರಿಗೆ ಕರ್ನಾಟಕ ವಿಶ್ವವಿದ್ಯಾನಿಲಯ ಪಿಹೆಚ್‌ಡಿ ಪದವಿ ನೀಡಿದೆ. ಲತಾ ಅವರು ಡಾ. ಶಕುಂತಲ ಸಿ. ಶೆಟ್ಟರ್ ಮಾರ್ಗದರ್ಶನದಲ್ಲಿ ವಿದೇಶಿ ವಿದ್ಯಾರ್ಥಿಗಳ ಸಾಂಸ್ಕೃತಿಕ ಹೊಂದಾಣಿಕೆಗೆ ಸಂಬಂಧಿಸಿದಂತೆ 'ಕಲ್ಚರಲ್ ಅಡ್ಜೆಸ್ಟ್ ಮೆಂಟ್ ಅಮಂಗ್ ಫಾರಿನ್ ಸ್ಟುಡೆಂಟ್ಸ್ ಇನ್ ಕರ್ನಾಟಕ: ಎ ಸೋಶಿಯಾಲಾಜಿಕಲ್ ಸ್ಟಡಿ' ವಿಷಯ ಕುರಿತು ಪ್ರಬಂಧ ಮಂಡಿಸಿದ್ದರು.

# ನಗರಕ್ಕೆ ಇಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್ ಈಶ್ವರಪ್ಪ ಅವರು ಇಂದು ಬೆಳಿಗ್ಗೆ 11 ಕ್ಕೆ ನಗರಕ್ಕೆ ಆಗಮಿಸಲಿದ್ದಾರೆ. ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ನಂತರ ಮಧ್ಯಾಹ್ನ 1 ಕ್ಕೆ ಹುಬ್ಬಳ್ಳಿಗೆ ತೆರಳುವರು.

# ಅಂಬೇಡ್ಕರ್ ಒಂದು ಜಾತಿಗೆ ಸೀಮಿತರಾಗಿರಲಿಲ್ಲ



ಹರಪನಹಳ್ಳಿಯ ಹಿರಿಯ ನ್ಯಾಯಾಧೀಶರಾದ ಎಂ. ಭಾರತಿ

ಹರಪನಹಳ್ಳಿ, ನ.26- ಡಾ. ಬಿ.ಆರ್. ಅಂಬೇಡ್ಕರ್ ಭಾರತ ಸಂವಿಧಾನವನ್ನು ರಚನೆ ಮಾಡಿದಾಗ ಯಾವುದೋ ಒಂದು ಜಾತಿಗೆ ಸಂವಿಧಾನ ರಚನೆ ಮಾಡಲಿಲ್ಲ. ಅವರು ಈ ದೇಶದ ಪ್ರತಿಯೊಬ್ಬ ನಾಗರಿಕರಿಗೂ ಅನ್ವಯವಾಗುವಂತೆ ಸಂವಿಧಾನವನ್ನು ರಚನೆ ಮಾಡಿದ್ದಾರೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಸಮಿತಿಯ ತಾಲ್ಲೂಕು ಅಧ್ಯಕ್ಷರಾದ ಎಂ. ಭಾರತಿ ಪ್ರತಿಪಾದಿಸಿದರು.

ಪಟ್ಟಣದ ವಕೀಲರ ಸಂಘದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಸಂವಿಧಾನ ದಿನಾಚರಣೆ ಕುರಿತು ಕಾನೂನು ಅರಿವು ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಬಳಿಕ ಸಂವಿಧಾನದ ಪ್ರತಿಜ್ಞಾ ವಿಧಿಯ ಸಂಕಲ್ಪವನ್ನು ಬೋಧಿಸಿ ಬಳಿಕ ಮಾತನಾಡಿದರು.

ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ ಸ್ಥಾನಮಾನ ಹಾಗೂ ಅವಕಾಶ ಸಮಾನತೆ ಸಾರಿದ್ದಾರೆ ಎಂದು ವಿಶ್ಲೇಷಿಸಿದರು.

ಸಮಾಜದಲ್ಲಿ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃತ್ವಭಾವನೆಯನ್ನು ವೃದ್ಧಿಗೊಳಿಸಲು ಕಾರಣೀಭೂತರಾಗಿದ್ದರು. ನಮ್ಮ ಸಂವಿಧಾನ ಸಭೆಯಲ್ಲಿ 1949 ರ ನವೆಂಬರ್ 26 ರಂದು ನಮ್ಮ ದೇಶಕ್ಕೆ ಸಂವಿಧಾನವನ್ನು ರಚಿಸಿ ಸಂವಿಧಾನ ದಿನವನ್ನಾಗಿ ಆಚರಿಸಲು ಅವಕಾಶ ಮಾಡಿಕೊಟ್ಟ ಮಹನೀಯರನ್ನು ಇಂದು ನೆನೆಯಬೇಕಾಗಿದೆ ಎಂದರು.

ನಮ್ಮ ದೇಶವನ್ನು ಕಾಡುತ್ತಿರುವ ಅನಿಷ್ಟ ಪದ್ಧತಿಯಾದ ದೇವದಾಸಿ ಪದ್ಧತಿಯನ್ನು ನಾವು, ನೀವು ಎಲ್ಲರೂ ಸೇರಿ ಕಾನೂನಿನ ಚೌಕಟ್ಟಿನಲ್ಲೇ ನೀಚ ಪದ್ಧತಿಯನ್ನು ಹೋಗಲಾಡಿಸಬೇಕು ಎಂದರು

ಈ ಸಂದರ್ಭದಲ್ಲಿ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿಗಳಾದ ಫಕ್ಕೀರವ್ವ ಕೆಳಗೇರಿ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್‌ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಟಿ. ವೆಂಕಟೇಶ್, ಕಣವಿಹಳ್ಳಿ ಮಂಜುನಾಥ್ ಮಾತನಾಡಿದರು. ಸಹಾಯಕ ಸರ್ಕಾರಿ ಅಭಿಯೋಜಕರಾದ ಎನ್. ಮಿನಾಕ್ಷಿ, ನಿರ್ಮಲ, ವಕೀಲ ಮುತ್ತಿಗಿ ರೇವಣಸಿದ್ದಪ್ಪ, ನ್ಯಾಯಾಲಯದ ಸಿಬ್ಬಂದಿಗಳಾದ ರೇವಣಸಿದ್ದಪ್ಪ, ಕೊಟ್ರೇಶ್, ಬಸವರಾಜ್ ಮತ್ತು ಇತರರು ಉಪಸ್ಥಿತರಿದ್ದರು.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ





ದಾವಣಗೆರೆ ವಿದ್ಯಾನಗರ ವಾಸಿ ಲಿಂ. ಶ್ರೀಮತಿ ಗೌರಮ್ಮ,
ಲಿಂ. ಶ್ರೀ ಬಿ.ಜಿ. ಕೊಟ್ರಪ್ಪ, ಮಾಜಿ ಶಾಸಕರು, ಹರಿಹರ
ಇವರ ಪುತ್ರ ಶ್ರೀಮತಿ ಶ್ರೀ ಬಿ.ಜಿ. ಶಿವಶಂಕರ್ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ : 23.11.2021ನೇ ಮಂಗಳವಾರ ಮಧ್ಯಾಹ್ನ 3.10ಕ್ಕೆ ನಮ್ಮ ಸಹೋದರನಾದ
**ಶ್ರೀ ಬಿ.ಜಿ. ಪ್ರಕಾಶ್** ವಕೀಲರು
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆ**ಯನ್ನು
ದಿ: 27.11.2021ನೇ ಶನಿವಾರ ಬೆಳಿಗ್ಗೆ 11.00ಕ್ಕೆ ಶ್ರೀ ನಿಮಿಷಾಂಬ ಸಮುದಾಯ ಭವನ, ನಿಜಲಿಂಗಪ್ಪ ಬಡಾವಣೆ, ಶ್ರೀ ಶಾರದಾಂಬ ದೇವಸ್ಥಾನದ ಪಕ್ಕ, ರಿಂಗ್ ರೋಡ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಬಿಂದುಶ್ರೀ ಪ್ರಕಾಶ್, ಕು. ಶಿವಾನಿ ಬಿ.ಜಿ.
ಶ್ರೀಮತಿ ಶ್ರೀ ಬಿ.ಜಿ. ಶಿವಶಂಕರ್, ಶ್ರೀಮತಿ ಶ್ರೀ ಬಿ.ಜಿ. ಮೋಹನ್
ಶ್ರೀಮತಿ ಶ್ರೀ ಬಿ.ಜಿ. ಆನಂದ ಹಾಗೂ ಸಹೋದರಿಯರು, ಮಕ್ಕಳು ಮತ್ತು ಮೊಮ್ಮಕ್ಕಳು,
ಬಿಳಸನೂರು ಗೌಡ್ರು ವಂಶಸ್ಥರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ: 88920 99805**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಪಾದಚಾರಿ ವಿದ್ಯಾರ್ಥಿನಿಯ ಬಂಗಾರದ ಸರ ಅಪಹರಣ

ದಾವಣಗೆರೆ, ನ.26- ನಗರದ ಕಾಲೇಜು ರಸ್ತೆಯಲ್ಲಿ ಪಾದಚಾರಿ ಪಿಯುಸಿ ವಿದ್ಯಾರ್ಥಿನಿಯೋರ್ವರ ಕೊರಳಲ್ಲಿದ್ದ 45 ಸಾವಿರ ಮೌಲ್ಯದ ಬಂಗಾರದ ಸರವನ್ನು ಹಾಡಹಗಲೇ ಅಪಹರಿಸಿರುವ ಘಟನೆ ನಡೆದಿದೆ.

ತಾಲ್ಲೂಕಿನ ಬಸವನಾಳು ಗ್ರಾಮದ ಬಿ.ಎನ್. ದೀಕ್ಷಿತ ಮೊನ್ನೆ ಸಂಜೆ ಅಥಣಿ ಕಾಲೇಜಿಗೆ ಪ್ರಥಮ ಪಿಯುಸಿ ಓದಲು ಬಂದಿದ್ದು, ಕಾಲೇಜು ಅವಧಿ ಮುಕ್ತಾಯದ ನಂತರ ತನ್ನ ವಿದ್ಯಾರ್ಥಿ ವೇತನದ ಅರ್ಜಿ ತುಂಬಲು ತನ್ನ ಅಂಕಪಟ್ಟಿಗಳನ್ನು ಜೆರಾಕ್ಸ್ ಮಾಡಿಸಲು ಜೆರಾಕ್ಸ್ ಅಂಗಡಿಗೆ ತಮ್ಮ ಕಾಲೇಜಿನಿಂದ ಎಂಬಿಎ ಕಾಲೇಜ್ ಕಡೆ ಹೋಗುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಬೈಕಿನಲ್ಲಿ ಎದುರುಗಡೆ ಬಂದು ಮುಂದೆ ಸಾಗಿದ ಅಪರಿಚಿತನೋರ್ವನು ವಾಪಸ್ ಬೈಕು ತಿರುಗಿಸಿಕೊಂಡು ಬಂದು ಈಕೆಯ ಕೊರಳಿಗೆ ಕೈ ಹಾಕಿ ಕೊರಳಲ್ಲಿದ್ದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾನೆ.

# ಮಲೇಬೆನ್ನೂರು ನೀರಾವರಿ ಕಚೇರಿ ಸ್ಥಳಾಂತರಕ್ಕೆ ವಿರೋಧ

ಮಲೇಬೆನ್ನೂರು, ನ.26- ಇಲ್ಲಿನ ಭದ್ರಾ ನಾಲಾ - 3 ವಿಭಾಗದ ಕಾರ್ಯಪಾಲಕ ಅಭಿಯಂತರ ಕಚೇರಿಯನ್ನು ಹೊನ್ನಾಳಿಗೆ ಸ್ಥಳಾಂತರ ಮಾಡುವುದಕ್ಕೆ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರು ಮತ್ತೆ ಪತ್ರದ ಮೂಲಕ ಸರ್ಕಾರಕ್ಕೆ ಒತ್ತಡ ಹಾಕುತ್ತಿರುವುದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

ಜೊತೆಗೆ ಬಸವಾಪಟ್ಟಣದಲ್ಲಿರುವ ಭದ್ರಾ ನಾಲಾ ನಂ. 1 ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಸಾಸ್ವೆಹಳ್ಳಿಯಲ್ಲಿರುವ ಭದ್ರಾ ನಾಲಾ ನಂ.4 ರ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿಯಲ್ಲಿ ವಿಲೀನಗೊಳಿಸುವಂತೆಯೂ ರೇಣುಕಾಚಾರ್ಯ ಅವರು ಮುಖ್ಯಮಂತ್ರಿ ಅವರ ಮೂಲಕ ನೀರಾವರಿ ಇಲಾಖೆಗೆ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಿದ್ದಾರೆ.

ಈ ಎಲ್ಲಾ ಪ್ರಯತ್ನಗಳನ್ನು ಸರ್ಕಾರ ಕೂಡಲೇ ಕೈ ಬಿಡದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರು ಎಚ್ಚರಿಕೆ ನೀಡಿದ್ದಾರೆ. ಈ ಹಿಂದೆಯೂ ರೇಣುಕಾಚಾರ್ಯ ಅವರು ಇದೇ ರೀತಿ ಪ್ರಯತ್ನ ಮಾಡಿದಾಗ ಭದ್ರಾ ಕಾಡಾ ಅಧ್ಯಕ್ಷರು ಮತ್ತು ಹರಿಹರ ತಾಲ್ಲೂಕಿನ ಜನಪ್ರತಿನಿಧಿಗಳು, ರೈತರು ವಿರೋಧ ವ್ಯಕ್ತಪಡಿಸಿದ್ದರು.

# ನಗರ - ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆವರಗೆರೆ, ಮೆಳ್ಳೆಕಟ್ಟೆ ಮತ್ತು ಕಾಡಜ್ಜಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಛೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ.ಎಸ್. ನಗರ. ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ, ಹೆಚ್.ಕೆ. ಆರ್. ನಗರ, ಕಬ್ಬೂರು ಬಸಪ್ಪ ನಗರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ಕಾಡಜ್ಜಿ ರೆಡ್ಡಿ ಕ್ಯಾಂಪ್, ಪುಟಗನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಗಾಂಧೀಜಿ, ಅಂಬೇಡ್ಕರ್ ಆದರ್ಶಗಳಡಿ ಸಮಾಜ ಸುಧಾರಣೆಗೆ ಸಂಕಲ್ಪ ಮಾಡೋಣ

ಜಗಳೂರಿನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಕರೆ



ಜಗಳೂರು, ನ.26- ದೇಶದಲ್ಲಿನ ಭಾಷೆ, ಧರ್ಮ, ಹಲವು ಸಂಸ್ಕೃತಿಗಳಿಗೆ ತಕ್ಕಂತಹ ಸಂವಿಧಾನ ಹೆಕ್ಕಿ ತರುವಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಶ್ರಮ, ಇಚ್ಛಾಶಕ್ತಿ ಅವಿಸ್ಮರಣೀಯ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಹೇಳಿದರು.

ಪಟ್ಟಣದ ಕೋರ್ಟ್ ಆವರಣದ ವಕೀಲರ ಸಂಘದ ಸಭಾಂಗಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂವಿಧಾನ ಶಿಲ್ಪಿ ಡಾ.ಬಿ. ಆರ್ ಅಂಬೇಡ್ಕರ್ ಹಾಗೂ ಮಹಾತ್ಮಗಾಂಧಿ ಅವರು ಮಹಾನ್ ವ್ಯಕ್ತಿಗಳಷ್ಟೇ ಅಲ್ಲದೆ ನ್ಯಾಯವಾದಿಗಳಾಗಿ ನಮಗೆ ಗೋಚರಿಸುತ್ತಿದ್ದಾರೆ. ಅವರ ಆದರ್ಶಗಳಡಿ ಒಂದಿಷ್ಟು ಸಮಾಜ ಸುಧಾರಣೆಗೆ ನಾವೆಲ್ಲರೂ ಸಂಕಲ್ಪ ಮಾಡೋಣ ಎಂದು ಕರೆ ನೀಡಿದರು.

ಅಪಾರ ಜನರ ರಕ್ತಪಾತ, ಹೋರಾಟ, ಸತ್ಯಾಗ್ರಹದ ಮೂಲಕ ದೊರೆತಿರುವ ಪವಿತ್ರವಾದ ಸ್ವಾತಂತ್ರ್ಯವು ಗುಂಪುಗಾರಿಕೆ, ಆಂತರಿಕ ಕಲಹಗಳಿಂದ ದುರ್ಬಳಕೆಯಾಗುತ್ತಿರುವುದರಿಂದ ಹೋರಾಟ ನಡೆಸಿದ ಮಹನೀಯರಿಗೆ ಅಪಮಾನಗೈದಂತೆ ಎಂದು ಬೇಸರ ವ್ಯಕ್ತಪಡಿಸಿದರು.

ಮಹಿಳೆಯರ ಆಸ್ತಿ ಹಕ್ಕಿನ ತೀರ್ಪುಗಳ ಕುರಿತ ಪ್ರಕರಣಗಳನ್ನು ಕೆಲ ಸಂದರ್ಭದಲ್ಲಿ ಅವಲೋಕನಗೈದಾಗ ಸಂವಿಧಾನದ ಅರ್ಥೈಸುವಿಕೆಯ ದೃಷ್ಟಿಕೋನ ಬದಲಾಗಿ ಮನುಷ್ಯ-ಮನುಷ್ಯನ ನಡುವೆ ಸಮಾನತೆ ಬೆಳೆಯುತ್ತದೆ ಎಂದು ತಿಳಿಸಿದರು.

ಸರ್ಕಾರಿ ಸಹಾಯಕ ಅಭಿಯೋಜಕಿ ಎಂ.ರೂಪ, ವಕೀಲರ ಸಂಘದ ಪದಾಧಿಕಾರಿಗಳಾದ ವೈ. ಹನುಮಂತಪ್ಪ, ಕೆ.ಎಂ ಬಸವರಾಜಯ್ಯ, ಪ್ರಕಾಶ್, ಪಂಪಣ್ಣ, ಕರಿಬಸಪ್ಪ, ತಿಪ್ಪೇಸ್ವಾಮಿ, ಕರಿಬಸಯ್ಯ, ಬಸವರಾಜಪ್ಪ, ಡಿ.ಶ್ರೀನಿವಾಸ್, ರುದ್ರೇಶ್, ಸೇರಿದಂತೆ ಪ್ಯಾನಲ್ ವಕೀಲರು ಉಪಸ್ಥಿತರಿದ್ದರು.

# ಜನಪರ ಚಿಂತನೆಯ ವರ್ತಕರ ಸಂಘದ ಅಮೃತ ಮಹೋತ್ಸವ

ಎರಡನೇ ಜಾಗತಿಕ ಮಹಾಯುದ್ಧದ ಸಂದರ್ಭ, ದಿನಸಿ ಸಾಮಗ್ರಿ ಗಳ ಕೊರತೆ, ಬಡವರ ಜೊತೆ ಧನಿಕರು ಒಂದೊತ್ತಿನ ಊಟಕ್ಕೂ ಪರದಾಡುವ ಸಂಕಷ್ಟದ ಕಾಲವದು. ಇದನ್ನರಿತ ಅಂದಿನ ವರ್ತಕರು ಇಲ್ಲಿ ಬೆಳೆದ ಕಾಳು, ಕಡಿಗಳನ್ನು ಹೊರಗಡೆ ಕಳಿಸಲು ಬಿಡದೆ ಇಲ್ಲಿಯೇ ಮಾರಾಟ ಮಾಡಲು ಈ ಸಂಘವನ್ನು ಸ್ಥಾಪಿಸಿದರು. ಅದುವೇ ಈಗ ಅಮೃತ ಮಹೋತ್ಸವ ಆಚರಿಸಿ ಕೊಳ್ಳುತ್ತಿರುವ ರಾಣೇಬೆನ್ನೂರಿನ ವರ್ತಕರ ಸಂಘ.

ಒಗ್ಗಟ್ಟು ಎಂತಹದೇ ಬಿಕ್ಕಟ್ಟನ್ನು ಎದುರಿಸಬಲ್ಲದು ಎನ್ನುವುದನ್ನರಿತ ಅಂದಿನ ಉತ್ಸಾಹಿ ವರ್ತಕರಾದ ಷಾ. ಹಿಂದೂಮಲ್, ರೇವಣಪ್ಪ ಮರಿಯಾನಿ, ಬಸಪ್ಪ ಗುಡ್ಡದ, ಚನ್ನಬಸಪ್ಪ ಉಪ್ಪಿನ, ಚನ್ನಬಸಪ್ಪ ಜಂಬಗಿ, ಶಂಕರಪ್ಪ ಸೂರಣಗಿ, ಮರಿತಮ್ಮಪ್ಪ ಹರಪನಹಳ್ಳಿ, ಶಿವಲಾಲ ಕೇಶಾಜಿ, ಹುಲ್ಲಪ್ಪ ಹನುಮನಹಳ್ಳಿ, ರೇವಣಪ್ಪ ಚಳಗೇರಿ, ಭಗವಾನದಾಸ ಗುಪ್ತ ಸೇರಿದಂತೆ ಇನ್ನಿತರೆ ಅನೇಕ ಸಮಾನ ಮನಸ್ಕರು ಜೊತೆಗೂಡಿ ಅಕ್ಟೋಬರ್ 15, 1942 ರಂದು ಸಂಘ ಸ್ಥಾಪನೆ ಮಾಡಿದರು.

ರಾಣೇಬೆನ್ನೂರು ನಗರ ಹಾಗೂ ವ್ಯಾಪಾರ, ವಹಿವಾಟು ನಡೆಸುತ್ತಿದ್ದ ಪಕ್ಕದ ಹಲಗೇರಿ ಗ್ರಾಮದ ವ್ಯಾಪ್ತಿಗೊಳಪಟ್ಟು ಕೇವಲ ಶೇಂಗಾ ಹಾಗೂ ಎಣ್ಣೆ ಕಾಳುಗಳ ವ್ಯಾಪಾರಸ್ಥರು ಮತ್ತು ಹತ್ತಿ-ಅರಳೆ ಖರೀದಿದಾರರ ಸದಸ್ಯತ್ವ ಹೊಂದಿದ್ದ ಸಂಘದಲ್ಲಿ, ಜವಳಿ ಹಾಗೂ ಕಿರಾಣಿ ವರ್ತಕರಿಗೂ ಸದಸ್ಯತ್ವ ನೀಡಿ ಸಂಘವನ್ನು ಬಲಪಡಿಸಲಾಯಿತು.

ವರ್ತಕರ, ಖರೀದಿದಾರರ ಹಿತ ಕಾಪಾಡುವ ಧ್ಯೇಯ ಹೊಂದಿದ್ದ ಸಂಘ ನಂತರದಲ್ಲಿ ದೇಶ, ನಾಡು-ನುಡಿ, ನಗರದ ಅಭಿವೃದ್ಧಿ, ಸರ್ಕಾರದ ಸಹಾಯ, ಸೌಲಭ್ಯ ಹೀಗೆ ಸಾರ್ವಜನಿಕರ ಹಿತಬಯಸುವ ಅನೇಕ ಕಾರ್ಯಕ್ರಮಗಳನ್ನು ಮೈಗೂಡಿಸಿಕೊಂಡು ಅವುಗಳಲ್ಲಿ ಯಶಸ್ಸು ಕಂಡದ್ದು ಸಂಘದ ಮಹತ್ಸಾಧನೆಯಾಗಿದೆ. ಹುಟ್ಟಿನಿಂದ ಇಂದಿನವರೆಗೂ ಒಂದಿಲ್ಲೊಂದು ಸಮಾಜಮುಖಿ ಕಾರ್ಯಗಳಲ್ಲಿ ಪಾಲು ಪಡೆಯುತ್ತಲೇ ಇದೆ.

ಕರ್ನಾಟಕ ಏಕೀಕರಣ, ರೈಲ್ವೆ ವ್ಯಾಗನ್ ಪ್ರಾರಂಭ, ಬಳ್ಳಾರಿ ಹಾಗೂ ಅನಂತಪುರ ಜಿಲ್ಲೆಗಳನ್ನು ಆಂಧ್ರಕ್ಕೆ ಸೇರಿಸುವ ವಂಚೂ ವರದಿಯ ವಿರುದ್ಧ ಉಗ್ರ ಹೋರಾಟ, ಕರ್ನಾಟಕ ರಾಜ್ಯ ನಿರ್ಮಾಣಕ್ಕೆ ಮುಂಬೈ ವಿಧಾನ ಪರಿಷತ್ ಸಭಾಪತಿ ಹುಕ್ಕೇರಿಕರ ರಾಮ ರಾಯರ ಮೇಲೆ ಒತ್ತಡ, ಮುಂಬೈ ಮಾರಾಟ ಕರ ಕಾಯ್ದೆ ವಿರೋಧ, ಅಂಚೆ, ದೂರವಾಣಿ, ವಿದ್ಯುತ್, ರೈಲ್ವೆ ಮುಂತಾದವುಗಳ ಸೌಲಭ್ಯ ಹೆಚ್ಚಿಸಲು ನಿರಂತರ ಪ್ರಯತ್ನ ಸಂಘದ ಇಂತಹ ಸಾಧನೆಗಳ ಪಟ್ಟಿ ಬೆಳೆಯುತ್ತಲೇ ಇದೆ.

- ಮನೋಹರ ಮಲ್ಲಾಡದ



**ಪಿಜಿ ಸೆಂಟರ್...**

ಸುಮಾರು ಎರಡು ದಶಕಗಳ ಹಿಂದೆ ರಾಣೇಬೆನ್ನೂರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ (ಪಿಜಿ ಸೆಂಟರ್) ಅವಶ್ಯವಿದೆ ಎನ್ನುವ ಬೇಡಿಕೆಯೊಂದಿಗೆ ರಾಣೇಬೆನ್ನೂರಿನ ಪತ್ರಕರ್ತರು ನಡೆಸಿದ ಅಂದಿನ ಹೋರಾಟಕ್ಕೆ ವರ್ತಕರ ಸಂಘ ಸಂಪೂರ್ಣ ಸಹಕಾರ ನೀಡಿತ್ತು. ಜನಪರ ಚಿಂತನೆಯ ಈ ಸಂಘದ ಚುಕ್ಕಾಣಿ ಪ್ರತಿ ಬಾರಿಯೂ ಜನಪರ ಚಿಂತಕರ ಕೈಗೆ ಸಿಗುತ್ತಲೇ ಬಂದಿರುವುದು ಶ್ಲಾಘನೀಯ.

# ತುಂಡಾದ ಐದೂ ಕಾಲ್ಬೆರಳು

**(1ನೇ ಪುಟದಿಂದ)** ಜಯನಗರದಲ್ಲಿ ವಾಸವಿರುವ ಜಗಳೂರು ತಾಲ್ಲೂಕಿನ ನಿಬಗೂರು ಗ್ರಾಮದ ಶರತ್‌ಗೌಡ, ಶುಕ್ರವಾರ ಬೆಳಗ್ಗೆ 8.40ರ ಸುಮಾರಿಗೆ ಜಯನಗರದಿಂದ ಕಾಲೇಜಿಗೆ ಹೋಗಲು ಸರ್ಕಾರಿ ಬಸ್ ಹತ್ತಿದ್ದಾರೆ. ಬಸ್ ಡಿಸಿಎ ಮೇಲ್ಸೇತುವೆ ಬಳಿ ಬಂದಿದ್ದು, ಶರತ್ ಬಸ್‌ನಿಂದ ಇಳಿಯುವಾಗ ಚಾಲಕ ಬಸ್ಸನ್ನು ಮುಂದೆ ಬಿಟ್ಟಿದ್ದಾನೆ ಎನ್ನಲಾಗಿದೆ. ಈ ವೇಳೆ ಆಯತಪ್ಪಿ ವಿದ್ಯಾರ್ಥಿ ಕೆಳಗೆ ಬಿದ್ದಿದ್ದು, ಆತನ ಕಾಲು ಬಸ್ ಡೋರ್ ಸಂದಿಯಲ್ಲಿ ಸಿಲುಕಿಕೊಂಡಿದೆ. ಪರಿಣಾಮ ಎಡಗಾಲಿನ 5 ಬೆರಳುಗಳು ತುಂಡಾಗಿವೆ.

ಕೂಡಲೇ ಬಸ್ ನಿರ್ವಾಹಕ ಅಲ್ಲೇ ಹೋಗುತ್ತಿದ್ದ ಕಾರಲ್ಲಿ ವಿದ್ಯಾರ್ಥಿಯನ್ನು ಎಸ್.ಎಸ್.ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನೆ ಕುರಿತು ದಕ್ಷಿಣ ಸಂಚಾರ ಪೊಲೀಸ್ ಠಾಣೆಗೆ ದೂರು ನೀಡಿರುವ ಗಾಯಾಳು, ಬಸ್ ಚಾಲಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿದ್ಯಾರ್ಥಿ ತಂದೆ ಎನ್.ಜಿ. ಸುರೇಶ್ ಕೋರಿದ್ದಾರೆ.

# 182 ಜನರಿಗೆ ಕೊರೊನಾ

**(1ನೇ ಪುಟದಿಂದ)** ತಿಳಿಯಲು ಜಿನೋಮ್ ಪರೀಕ್ಷೆಗೆ ಕಳಿಸಲಾಗಿದೆ ಎಂದು ಆರೋಗ್ಯ ಆಯುಕ್ತ ಡಿ. ರಣದೀಪ್ ಹೇಳಿದ್ದಾರೆ.

ಒಂದೇ ಕಡೆ ಇಷ್ಟೊಂದು ಜನರು ಸೋಂಕಿಗೆ ಗುರಿಯಾಗಿರುವುದು ಕಳವಳಕಾರಿಯಾಗಿದೆ. ಈ ರೂಪಾಂತರಿ ವೇಗವಾಗಿ ಹರಡಿರುವ ಸಾಧ್ಯತೆ ಇದೆ. ಅಲ್ಲದೇ ಪೂರ್ಣ ಲಸಿಕೆ ಪಡೆದರೂ ಸೋಂಕು ಬಂದಿರುವುದನ್ನು ಗಮನಿಸಿದಾಗ, ಈ ರೂಪಾಂತರಿ ಲಸಿಕೆಯನ್ನು ಮೀರುವ ಸಾಧ್ಯತೆ ಇದೆ ಎಂದು ಮಣಿಪಾಲ ಆಸ್ಪತ್ರೆಯ ಅಧ್ಯಕ್ಷ ಹಾಗೂ ರಾಜ್ಯ ಕೊವಿಡ್ ಕಾರ್ಯಪಡೆಯ ಸದಸ್ಯ ಡಾ. ಸುದರ್ಶನ್ ಬಲ್ಲಾಳ್ ಹೇಳಿದ್ದಾರೆ. ಆದರೆ, ಸೋಂಕಿತರಲ್ಲಿ ರೋಗ ತೀವ್ರವಾಗಿಲ್ಲ. ನಾವು ನಿಶ್ಚಿತವಾ ಗಿಯೂ ಕೊರೊನಾ ಶಿಷ್ಟಾಚಾರಗಳನ್ನು ಪಾಲಿಸಬೇಕಿದೆ ಎಂದು ಡಾ. ಬಲ್ಲಾಳ್ ಹೇಳಿದ್ದಾರೆ. ಈ ನಡುವೆ, ಬೆಂಗಳೂರಿನ ದೊಮ್ಮಸಂದ್ರದಲ್ಲಿರುವ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಬೆಂಗಳೂರು ಶಿಕ್ಷಣ ಸಂಸ್ಥೆಯಲ್ಲಿ 33 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಕೊರೊನಾ ಸೋಂಕಿರುವುದು ಕಂಡು ಬಂದಿದೆ. ಇಲ್ಲಿನ 497 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿತ್ತು.

# ನೀತಿ ಆಯೋಗದ ಸೂಚ್ಯಂಕ

**(1ನೇ ಪುಟದಿಂದ)** ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಬಿಜಾಪುರ. 2015ರಲ್ಲಿ 193 ದೇಶಗಳು ಮಾನ್ಯತೆ ನೀಡಿರುವ ಸುಸ್ಥಿರ ಅಭಿವೃದ್ಧಿ ಗುರಿಗಳ ಮಾನದಂಡದ ಮೇಲೆ ಬಡತನದ ಸೂಚ್ಯಂಕ ರೂಪಿಸಲಾಗಿದೆ. ಈ ರೂಪುರೇಷೆಯ ಅನ್ವಯ ಅಭಿವೃದ್ಧಿ ನೀತಿ, ಸರ್ಕಾರದ ಆದ್ಯತೆ ಹಾಗೂ ಬೆಳವಣಿಗೆ ಅಳೆಯುವ ವಿಧಾನವನ್ನು ವಿಶ್ವದಾದ್ಯಂತ ಬದಲಿಸಲಾಗಿದೆ.

# ಸಂವಿಧಾನದಲ್ಲಿದೆ ಮಾನವೀಯ ಗುಣ : ಸಿಎಂ

**(1ನೇ ಪುಟದಿಂದ)** ಭಾರತೀಯರಲ್ಲಿ ಮಾನವೀಯ ಗುಣಗಳನ್ನು ಮೂಡಿಸುವ ಹೊಣೆಗಾರಿಕೆ ಯನ್ನು ಸಂವಿಧಾನ ಯಶಸ್ವಿಯಾಗಿ ನಿಭಾಯಿ ಸಿದೆ. ಭಾರತದ ಪ್ರಜಾಪ್ರಭುತ್ವ ಯಶಸ್ವಿಯಾ ಗಿದೆ ಎಂದರೆ ಅದು ತ್ಯಾಗ ಮತ್ತು ಅಂತಃಕರಣದಿಂದ ಮಾತ್ರ. ಇವೆರಡರಿಂದ ವಿವಿಧ ಸಂಸ್ಕೃತಿ, ಭಾಷೆಗಳನ್ನು ನಮ್ಮ ದೇಶ ಒಳಗೊಂಡಿದೆ ಎಂದು ತಿಳಿಸಿದರು.

ಸಂವಿಧಾನ ಇಲ್ಲದಿದ್ದರೆ ದೇಶದ ಐಕ್ಯತೆ, ಅಖಂಡತೆ, ಹಕ್ಕುಗಳನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ. ಈ ದೇಶ ಒಗ್ಗೂಡಿಸುವಲ್ಲಿ ಸಂವಿಧಾನ ಮಹತ್ವದ ಪಾತ್ರ ವಹಿಸಿದೆ. ಇಂಗ್ಲೆಂಡ್ ದೇಶದಲ್ಲಿರುವ ಕಾನೂನುಗಳಿಗಿಂತ ಭಾರತದ ಸಂವಿಧಾನದಲ್ಲಿರುವ ಕಾನೂನುಗಳು ಅತ್ಯಂತ ಶ್ರೇಷ್ಠವಾಗಿವೆ. ತತ್ವಜ್ಞಾನಿಯಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರು ಬಸವ, ಬುದ್ಧ ಸೇರಿದಂತೆ ದೊಡ್ಡ ತತ್ವಜ್ಞಾನಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಹೀಗಾಗಿ ಬುದ್ಧ, ಬಸವರ ತತ್ವಗಳನ್ನು ಸಂಪೂರ್ಣವಾಗಿ ಸಂವಿಧಾನದಲ್ಲಿ ಕಾಣುತ್ತಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್, ಸಂಸದ ಜಿ.ಎಂ ಸಿದ್ದೇಶ್ವರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಶಾಸಕರುಗಳಾದ ಪ್ರೊ.ಲಿಂಗಣ್ಣ, ಎಸ್.ವಿ. ರಾಮಚಂದ್ರ, ಮಾಡಾಳ್ ವಿರೂಪಾಕ್ಷಪ್ಪ, ಮಹಾನಗರ ಪಾಲಿಕೆ ಮೇಯರ್ ಎಸ್.ಟಿ.ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ ಸಿಇಓ ವಿಜಯ ಮಹಾಂತೇಶ ದಾನಮ್ಮನವರ್, ಅಪರ ಜಿಲ್ಲಾಧಿಕಾರಿ ಸದಾಶಿವ ಪ್ರಭು, ಐಜಿಪಿ ರವಿ, ಎಸ್.ಪಿ ಸಿ.ಬಿ.ರಿಷ್ಯಂತ್, ಎಎಸ್‌ಪಿ ರಾಜೀವ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸ್ಮಾರ್ಟ್ ಸಿಟಿ ಎಂಡಿ ರವೀಂದ್ರಮಲ್ಲಾಪುರ ಇತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಗೆ ಅರ್ಜಿ ಆಹ್ವಾನ

ದಾವಣಗೆರೆ, ನ.26- ಹೊಸದಿಲ್ಲಿಯ ಎನ್.ಸಿ.ಇ.ಆರ್.ಟಿ ಮಾರ್ಗಸೂಚಿಯಂತೆ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ ಎನ್‌ಟಿಎಸ್‌ಇ ಪರೀಕ್ಷೆಯನ್ನು 2 ಹಂತಗಳಲ್ಲಿ ನಡೆಸಲಾಗುತ್ತಿದ್ದು, ಮೊದ ಲನೇ ಹಂತದ ಪರೀಕ್ಷೆಯನ್ನು ರಾಜ್ಯ ಮಟ್ಟ ದಲ್ಲಿ 2022ರ ಜನವರಿ-16ರಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಕೆಎಸ್‌ಕ್ಯೂಎಎಸಿ ವತಿಯಿಂದ ನಡೆಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನ. ಮಾಹಿತಿಗಾಗಿ ಕೆಎಸ್‌ಕ್ಯೂಎಎಸಿ ಕಛೇರಿಯ ದೂ.ಸಂ: 080-23341615 ಗೆ ಸಂಪರ್ಕಿಸಬಹುದು.

# ಹಿಂದಿನ ಕಾಂಗ್ರೆಸ್ ಅವಧಿಯ ಟೆಂಡರ್‌ಗಳೂ ತನಿಖೆಗೆ

ದಾವಣಗೆರೆ, ನ.26- ಹಿಂದೆ ಕಾಂಗ್ರೆಸ್ ಅವಧಿಯಲ್ಲಿ ನಡೆದಿರುವ ಟೆಂಡರ್‌ಗಳನ್ನೂ ತನಿಖೆ ನಡೆಸುವಂತೆ ಇಂದೇ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭ್ರಷ್ಟಾಚಾರ ನಡೆಸುತ್ತಿರುವ ರಾಜ್ಯ ಸರ್ಕಾರವನ್ನು ವಜಾಗೊಳಿಸುವಂತೆ ಕಾಂಗ್ರೆಸ್ ನಾಯಕರು ರಾಜ್ಯಪಾಲರಿಗೆ ದೂರು ನೀಡಿರುವ ಕುರಿತ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್‌ನವರು ದೂರು ನೀಡಿರುವುದೇ ಹಾಸ್ಯಾಸ್ಪದ ಎಂದರು.

ಪರ್ಸೆಂಟೇಜ್ ಜನಕರೇನಾದರೂ ಇದ್ದರೆ ಅದು ಕಾಂಗ್ರೆಸ್ ನವರೇ. ಪ್ರತಿ ಬಾರಿ ಅಧಿಕಾರಕ್ಕೆ ಬಂದಾಗಲೂ ಪರ್ಸೆಂಟೇಜ್ ಹೆಚ್ಚು ಮಾಡಿಕೊಳ್ಳುತ್ತಾ ಬಂದಿದ್ದಾರೆ. ಈ ಬಗ್ಗೆ ಕಾಂಗ್ರೆಸ್‌ನ ಇಬ್ಬರು ನಾಯಕರು ಪಿಸು ಮಾತನಾಡಿರುವ ವಿಡಿಯೊ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಅವರೇ ಪರ್ಸೆಂಟೇಜ್ ಪ್ರಾರಂಭಿಸಿದ್ದಾರೆ. ಈಗ ಅವರೇ ಮನವಿ ಕೊಟ್ಟಿದ್ದಾರೆ. ಇದು ಎಲ್ಲಾ ಗುತ್ತಿಗೆದಾರರಿಗೂ ಗೊತ್ತಿದೆ ಎಂದು ಹೇಳಿದರು.

ಎಸಿಬಿಗೆ ಮುಕ್ತವಾಗಿ ಸ್ವಾತಂತ್ರ್ಯ ನೀಡಿದ್ದರಿಂದ ದೊಡ್ಡ ಪ್ರಮಾಣದ ಭ್ರಷ್ಟಾಚಾರ ಬಯಲಿಗೆ ಬಂದಿದೆ. ಭ್ರಷ್ಟ ಅಧಿಕಾರಿಗಳನ್ನು ಶಿಕ್ಷೆಗೊಳಪಡಿಸುತ್ತೇವೆ. ವ್ಯವಸ್ಥೆಯ ಶುದ್ಧೀಕರಣ ಕೆಲಸವನ್ನು ಎಸಿಬಿ ದಾಳಿಯ ಮೂಲಕ ಆರಂಭಿಸಿದ್ದೇವೆ ಎಂದು ಬೊಮ್ಮಾಯಿ ತಿಳಿಸಿದರು.

> **“ದಾವಣಗೆರೆ ಜಿಲ್ಲೆಯಲ್ಲಿ ಐ ಸೈಟ್ ಸರ್ವೇ ವರದಿ ಪ್ರಕಾರ 9,800 ಹೆಕ್ಟೇರ್ ಕೃಷಿ ಬೆಳೆ ಹಾಗೂ 2,147 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಇದರ ಬಗ್ಗೆಯೂ ಸಮಗ್ರ ಸಮೀಕ್ಷೆ ನಡೆಸುವಂತೆ ಸೂಚಿಸಲಾಗಿದೆ.**
> **- ಬಸವರಾಜ ಬೊಮ್ಮಾಯಿ, ಸಿಎಂ**

**ಬೆಳೆಹಾನಿಯ ಸಂಪೂರ್ಣ ಸಮೀಕ್ಷೆಗೆ ಸೂಚನೆ:** ಪ್ರತಿ ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಇಲಾಖೆಗಳಿಂದ ಜಂಟಿ ಸಮೀಕ್ಷೆ ನಡೆಸುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ಭತ್ತ ಹಾಗೂ ಮೆಕ್ಕೆಜೋಳ, ದಕ್ಷಿಣ ಕರ್ನಾಟಕದಲ್ಲಿ ರಾಗಿ, ಭತ್ತ, ತರಕಾರಿ ಬೆಳೆಗಳು ನಾಶವಾಗಿವೆ. ಸಾಮಾನ್ಯವಾಗಿ ಸರ್ವೆ ತಡವಾಗುತ್ತದೆ. ಆದರೆ ನಾನು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಲಾಗಿದ್ದು, ನಿತ್ಯದ ಸರ್ವೆಯನ್ನು ಪರಿಹಾರ ಆಪ್‌ಗೆ ಅಪ್ ಲೋಡ್ ಆದ ತಕ್ಷಣವೇ ಪರಿಹಾರ ಕಲ್ಪಿಸುವಂತೆ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದೇನೆ ಎಂದು ಹೇಳಿದರು.

ಸಂಪೂರ್ಣ ಸಮೀಕ್ಷೆ ವರದಿ ಬಂದ ನಂತರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಹೇಳಿದರು.




ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ.
ನಿಮ್ಮ ನಗರದಲ್ಲಿ ಪ್ರತಿ ದಿನ 2 ನಾಟಕ
ಪುಗಸಟ್ಟೆ ಗಂಡ ಹೊಟ್ಟೆ ತುಂಬಾ ಉಂಡ
ಹಾಸ್ಯ ಭರಿತ ಸಾಮಾಜಿಕ ನಾಟಕ
ಈ ನಾಟಕದಲ್ಲಿ ಕಾಮಿಡಿ ಕಿಲಾಡಿಗಳು ಖ್ಯಾತಿಯ ವಾಣಿಶ್ರೀಯವರು ಇವರು ಹಾಸ್ಯ ಪಾತ್ರದಲ್ಲಿ
ದಿನಾಂಕ 27.11.2021 ಹಾಗೂ 28.11.2021 ಕೇವಲ ಎರಡು ದಿನ ಮಾತ್ರ, ಸಮಯ ಮಧ್ಯಾಹ್ನ 3ಕ್ಕೆ ಮತ್ತು ಸಂಜೆ 6ಕ್ಕೆ
ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎಸ್. ಕಾಂಪೌಂಡ್‌ನಲ್ಲಿ
ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862

## ಬೇಕಾಗಿದ್ದಾರೆ

Diploma in Hardware Networking / Software
2 ವರ್ಷ ಅನುಭವ ಇರುವವರು ಬೇಕಾಗಿದ್ದಾರೆ.
ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.
ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.
ಸಂಪರ್ಕಿಸಿ : ಎ.ಕೆ. ಫಾರ್ಮ
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

## ಜನ್ಮದಿನದ ಶುಭಾಶಯಗಳು



ಅಖಿಲಭಾರತ ವೀರಶೈವ -ಲಿಂಗಾಯತ ಮಹಾಸಭಾದ ಜಿಲ್ಲಾ ಕಾರ್ಯಕಾರಣಿ ಸದಸ್ಯರು,ಅಕ್ಕಿ ವರ್ತಕರು ಹಾಗೂ ಹರ್ಷ ಕಮರ್ಷಿಯಲ್ ಮಾಲೀಕರು, ಬಿ.ಜೆ.ಪಿ ಯುವ ಮುಖಂಡರಾದ
ಜಯಪ್ರಕಾಶ್ ಮಾಗಿ
ಅವರಿಗೆ ಜನ್ಮದಿನದ ಶುಭಾಶಯಗಳು.
ಶುಭ ಕೋರುವವರು:
ಶ್ರೀ ಕಾಂತ್ ನೀಲಗುಂದ
ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾದ ಯುವ ಘಟಕದ ಪ್ರಧಾನ ಕಾರ್ಯದರ್ಶಿಗಳು, ಬಿ.ಜೆ.ಪಿ ಯುವ ಮುಖಂಡರು ಮತ್ತು ಸ್ನೇಹ ಬಳಗ

## ಮಕ್ಕಳಲ್ಲಿ ಕಂಡು ಬರುವಂತಹ

♦ ಅಪಸ್ಮಾರ ♦ ಸೆರೆಬ್ರಲ್ ಪಾಲ್ಸಿ (ಪಾರ್ಶ್ವವಾಯು)
♦ ಆಟಿಸಮ್/ಎ.ಡಿ.ಹೆಚ್.ಡಿ/ಕಲಿಕೆಯಲ್ಲಿ ಅಸಮರ್ಥತೆ
♦ ಬೆಳವಣಿಗೆಯಲ್ಲಿ ಕುಂಠಿತ ♦ ಶ್ವಾಸಕೋಶದ ತೊಂದರೆ
♦ ಮಲಬದ್ಧತೆ ♦ ಜಂತಿನ ತೊಂದರೆ
ಇನ್ನು ಮುಂತಾದ ತೊಂದರೆಗಳಿಗೆ ಬೆಂಗಳೂರಿನ ಪ್ರಖ್ಯಾತ ವೈದ್ಯೆ ಮತ್ತು ಆಯುರ್ವೇದದ ಮಕ್ಕಳ ತಜ್ಞರಾದ ಡಾ|| ಪೂರ್ಣಿಮಾರವರು ನಮ್ಮ ಆಸ್ಪತ್ರೆಗೆ ಪ್ರತೀ ತಿಂಗಳು ಭೇಟಿ ನೀಡಲಿದ್ದಾರೆ.
ಆಸಕ್ತರು ಹೆಸರು ನೋಂದಾಯಿಸಲು ಇಂದೇ ಸಂಪರ್ಕಿಸಿ.
ದಿನಾಂಕ ಮತ್ತು ಸಮಯ : 28-11-2021. ಸಮಯ : ಬೆಳಿಗ್ಗೆ 11 ರಿಂದ ಸಂಜೆ 5 ರವರೆಗೆ.
ANVAYA
ಅನ್ವಯ ಆಯುರ್ವೇದ ಆಸ್ಪತ್ರೆ
#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಫೋ: 08192 252228 ಮೊ: 86186 42929

## ಹಾರ್ದಿಕ ಶುಭಾಶಯಗಳೊಂದಿಗೆ




ಕೊಪ್ಪಳ ಗವಿಸಿದ್ದೇಶ್ವರ ಶ್ರೀ ಗಳಿಗೆ, ಸಾಣೇಹಳ್ಳಿ ಡಾ|| ಪಂಡಿತಾರಾಧ್ಯ ಶ್ರೀ ಗಳಿಗೆ ಭಕ್ತಿಪೂರ್ವಕ ಸ್ವಾಗತ- ಸುಸ್ವಾಗತ.
ರಾಣೇಬೆನ್ನೂರಿನಲ್ಲಿಂದು ನಡೆಯುವ ವರ್ತಕರ ಸಂಘದ ಅಮೃತ ಮಹೋತ್ಸವಕ್ಕೆ ಆಗಮಿಸುವ ಸರ್ವರಿಗೂ ಆದರದ ಆಹ್ವಾನ
ಶ್ರೀ ಶಿವ ಕಮೀಷನ್ ಏಜೆನ್ಸಿ
SHREE SHIVA COMMISSION AGENCY
General Merchants & Commission Agents,
Nehru Market & A.P.M.C. yard, Ranebennur-581 115
ಶ್ರೀ ಅಶೋಕ ಜಿ. ಗಂಗನಗೌಡ್ರು
ಅಧ್ಯಕ್ಷರು, ಶಿವ ವಿವಿಧೋದ್ದೇಶಗಳ ಸೌ.ಸ.ನಿ., ಹಾಗೂ ಅಧ್ಯಕ್ಷರು ನೆಹರು ಮಾರ್ಕೆಟ್ ವರ್ತಕರ ಸಂಘ (ರಿ.) ರಾಣೇಬೆನ್ನೂರು.
ಶ್ರೀ ರಮೇಶ್ ಜಿ. ಗಂಗನಗೌಡ್ರು, ಮೊ. : 98866 89595, 98868 27558
ಶ್ರೀ ಕಿರಣ ಅಶೋಕ ಗಂಗನಗೌಡ್ರು, ಪಿ.ಡಬ್ಲ್ಯೂಡಿ ಹಾಗೂ ನಗರಸಭೆ ಕ್ಲಾಸ್-II ಕಂಟ್ರಾಕ್ಟರ್, ಮೃತ್ಯುಂಜಯ ನಗರ, ರಾಣೇಬೆನ್ನೂರು. ಮೊ. : 96180 69664



Prop : Dr. Prakash P. Patil
HOTEL MALLIKARJUNA RESIDENCY
A Luxurious Premium Business Hotel Cinnamon Multicuisine Longue Restaurant Attached Bar, Veg-Non.veg
P.B. Road, Ranebennur-581115, Dist. Haveri, Karnataka
Ph. : 08373 366955, 7996555115
email : mallikarjunaresidency@rediffmail.com
website : mallijarjunaresidency.com


## ಹಾರ್ದಿಕ ಶುಭಾಶಯಗಳೊಂದಿಗೆ




ಕೊಪ್ಪಳ ಗವಿಸಿದ್ದೇಶ್ವರ ಶ್ರೀ ಗಳಿಗೆ ಹಾಗೂ ಸಾಣೇಹಳ್ಳಿ ಡಾ|| ಪಂಡಿತಾರಾಧ್ಯ ಶ್ರೀ ಗಳಿಗೆ
ಭಕ್ತಿಪೂರ್ವಕ ಸ್ವಾಗತ- ಸುಸ್ವಾಗತ. ರಾಣೇಬೆನ್ನೂರಿನಲ್ಲಿಂದು ನಡೆಯುವ ವರ್ತಕರ ಸಂಘದ ಅಮೃತ ಮಹೋತ್ಸವಕ್ಕೆ ಆಗಮಿಸುವ ಸರ್ವರಿಗೂ ಆದರದ ಆಹ್ವಾನ



ರಾಜಣ್ಣ
ಫೋ. : 99641 45040
ಲೋಕೇಶ್
ಫೋ. : 99869 15569



ಶ್ರೀ ಸಿದ್ದೇಶ್ವರ ಎಂಟರ್‌ಪ್ರೈಸಸ್
ಜನರಲ್ ಮರ್ಚೆಂಟ್ಸ್ & ಕಮೀಷನ್ ಏಜೆಂಟ್ಸ್, ನೆಹರು ಮಾರ್ಕೆಟ್ ಎಪಿಎಂಸಿ ಯಾರ್ಡ್, ರಾಣೇಬೆನ್ನೂರು-581 115 ಜಿಲ್ಲಾ ಹಾವೇರಿ.

## ಹಾರ್ದಿಕ ಶುಭಾಶಯಗಳೊಂದಿಗೆ




ಕೊಪ್ಪಳ ಗವಿಸಿದ್ದೇಶ್ವರ ಶ್ರೀ ಗಳಿಗೆ ಹಾಗೂ ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀ ಗಳಿಗೆ
ಭಕ್ತಿಪೂರ್ವಕ ಸ್ವಾಗತ- ಸುಸ್ವಾಗತ
ರಾಣೇಬೆನ್ನೂರಿನಲ್ಲಿಂದು ನಡೆಯುವ ವರ್ತಕ ಸಂಘದ
ಅಮೃತ ಮಹೋತ್ಸವಕ್ಕೆ
ಆಗಮಿಸುವ ಸರ್ವರಿಗೂ ಆದರದ ಆಹ್ವಾನ
ಶ್ರೀ ಸಂಗಮೇಶ್ವರ ಟ್ರೇಡರ್ಸ್
ಜನರಲ್ ಮರ್ಚೆಂಟ್ಸ್ & ಕಮೀಷನ್ ಏಜೆಂಟ್ಸ್, ನೆಹರು ಮಾರ್ಕೆಟ್ ರಾಣೇಬೆನ್ನೂರು-581 115 ಜಿಲ್ಲಾ ಹಾವೇರಿ. ಕರ್ನಾಟಕ
ಫೋ. : 9448069571, 9844714611, 8296741194

## ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

# 683/2, 8ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002.ದೂರವಾಣಿ : 08192-259693

### ಮಾನ್ಯ ಸದಸ್ಯರ ಗಮನಕ್ಕೆ

ನಮ್ಮ ಸೊಸೈಟಿಯ 2020-2021ನೇ ಸಾಲಿನ 25ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ದಿನಾಂಕ 28.11.2021ನೇ ಭಾನುವಾರ ಬೆಳಿಗ್ಗೆ 11 ಕ್ಕೆ ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್ ಮೂಲಕ ಸೊಸೈಟಿ ಅಧ್ಯಕ್ಷರಾದ ಶ್ರೀ ಎಸ್.ಎಂ. ವೀರಭದ್ರಸ್ವಾಮಿ ತ್ಯಾವಣಗಿ ಇವರ ಘನ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಈ ವರ್ಚ್ಯುವಲ್ ಮಹಾಸಭೆಯಲ್ಲಿ ಸರ್ವ ಸದಸ್ಯರು ಭಾಗವಹಿಸಿ, ಮಹಾಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ. ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಸರ್ವ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. ಹಾಗೂ ಪತ್ರಿಕಾ ಪ್ರಕಟಣೆ ಮೂಲಕವೂ ತಿಳಿಸಲಾಗಿದೆ.

https://ihost.iroot.in/m/svm Login with your mobile no. password is : 123456

ವಿ.ಸೂ. : ಈ ಮೇಲ್ಕಂಡ ಲಿಂಕ್‌ಗೆ ಲಾಗಿನ್ ಆದ ತಕ್ಷಣವೇ, ನಿಮ್ಮ ಹೆಸರು ಅಥವಾ ಫೋನ್ ನಂಬರನ್ನು ನೋಂದಾಯಿಸಲು ಅವಕಾಶ ಇರುತ್ತದೆ. ತಪ್ಪದೇ ನೋಂದಾಯಿಸಿ ನಂತರ ಮಹಾಸಭೆ ನಡೆದ 20 ದಿನಗಳ ನಂತರ ಸೊಸೈಟಿಯ ಕಛೇರಿಗೆ ಬಂದು ತಾವುಗಳು ಲಾಗಿನ್ ಆದ ಫೋನ್ ನಂಬರನ್ನು ತಿಳಿಸಿದಲ್ಲಿ ಪರಿಶೀಲಿಸಿ ಮಹಾಸಭೆಯ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಲು (ಸುಸ್ತಿದಾರರನ್ನು ಹೊರತು ಪಡಿಸಿ) ಅವಕಾಶ ನೀಡಲಾಗುವುದು.
ಹೆಚ್ಚಿನ ಮಾಹಿತಿಗಾಗಿ ದೂರವಾಣಿ : 08192 259693, ಮೊ. : 8792289139ಗೆ ಸಂಪರ್ಕಿಸಬಹುದು.

https://ihost.iroot.in/m/svm Login with your mobile no. password is : 123456

| ಸಹಿ/- | ಸಹಿ/- | ಸಹಿ/- |
|---|---|---|
| ತ್ಯಾವಣಗಿ ವೀರಭದ್ರಸ್ವಾಮಿ<br>ಅಧ್ಯಕ್ಷರು | ಪಂಚಾಕ್ಷರಯ್ಯ (ಬಸಾಪುರ)<br>ಉಪಾಧ್ಯಕ್ಷರು | ಶ್ರೀಮತಿ ತನುಜಾ<br>ಪ್ರಭಾರಿ ಕಾರ್ಯದರ್ಶಿ |

# ಸಂವಿಧಾನ ಇಲ್ಲದಿದ್ದರೆ ನಮ್ಮ ಬದುಕು ಹೇಗಿರುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ



**ಜಿಗಳಿಯಲ್ಲಿ ಸಂವಿಧಾನ ದಿನಾಚರಣೆ**

ಮಲೇಬೆನ್ನೂರು, ನ.26- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ 'ಸಂವಿಧಾನ ದಿನಾಚರಣೆ' ಕಾರ್ಯಕ್ರಮವನ್ನು ಆಚರಿಸಲಾಯಿತು.

ವಿದ್ಯಾರ್ಥಿನಿಯರಾದ ಪ್ರಗತಿ, ಸಿಂಚನಾ, ತನುಶ್ರೀ, ಕವನ ಇವರು ಭಾರತದ ಸಂವಿಧಾನ ಪೀಠಿಕೆಯನ್ನು ಎಲ್ಲರಿಗೂ ಪ್ರತಿಜ್ಞೆ ಮಾಡಿಸಿದರು.

'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವತಂತ್ರ ಭಾರತದ ಇತಿಹಾಸದಲ್ಲಿ ನವೆಂಬರ್‌ನಲ್ಲಿ 26 ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದ್ದು, ಡಾ. ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದ ಸಮಿತಿಯು ರಚನೆ ಮಾಡಿ, 1949 ನವೆಂಬರ್ 26ರಲ್ಲಿ ನೀಡಿದ ಭಾರತದ ಸಂವಿಧಾನ 1950 ಜನವರಿ 26ರಲ್ಲಿ ಜಾರಿಗೆ ಬಂದಿತು. ಅಲ್ಲಿಂದ ದೇಶದಲ್ಲಿ ಹೊಸಯುಗದ ಉದಯವಾಯಿತು.

ಸಂವಿಧಾನದ ಚೌಕಟ್ಟುಗಳ ಕೊಡುಗೆಯನ್ನು ಅಂಗೀಕರಿಸಲು ಮತ್ತು ಪ್ರಮುಖ ಮೌಲ್ಯಗಳಿಗೆ ಸಂಬಂಧಿಸಿದಂತೆ ಜನರನ್ನು ಉಲ್ಲಾಸಗೊಳಿಸಲು ನವೆಂಬರ್ 26 ಅನ್ನು ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಶಿಕ್ಷಕ ವಾಸನದ ಗುಡ್ಡಪ್ಪ ಮಾತನಾಡಿ, ಭಾರತದ ಸಂವಿಧಾನ ಹೇಗೆ ರಚನೆ ಆಯಿತು ಮತ್ತು ಸಂವಿಧಾನ ರಚನೆಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಪಾತ್ರ ಕುರಿತು ವಿವರವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ದೇಶದಲ್ಲಿ ಸಂವಿಧಾನ ಜಾರಿಗೆ ಬಂದ ನಂತರ ಆದ ಮಹತ್ತರ ಬದಲಾವಣೆ ಕುರಿತೂ ಹೇಳಿದ ಶಿಕ್ಷಕ ಗುಡ್ಡಪ್ಪ ಅವರು, ಸಂವಿಧಾನ ಇಲ್ಲದಿದ್ದರೆ ನಮ್ಮ ಬದುಕು ಹೇಗೆ ಇರುತ್ತಿತ್ತು ಎಂಬುದನ್ನು ನಾವು - ನೀವು ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದರು. ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಸದಸ್ಯರಾದ ಡಿ.ಪಿ.ಚಿದಾನಂದ್, ವಿಜಯ ಭಾಸ್ಕರ್, ಗ್ರಾ.ಪಂ. ಮಾಜಿ ಸದಸ್ಯ ಜಿ.ಕೃಷ್ಣಮೂರ್ತಿ, ಗ್ರಾ.ಪಂ. ಕಾರ್ಯದರ್ಶಿ ಶೇಖರನಾಯ್ಕ, ಶಾಲಾ ಮುಖ್ಯ ಶಿಕ್ಷಕ ಕರಿಬಸಪ್ಪ, ಶಿಕ್ಷಕರಾದ ನಾಗೇಶ್, ಶ್ರೀನಿವಾಸ್ ರೆಡ್ಡಿ, ಮಲ್ಲಿಕಾರ್ಜುನ್, ಲೋಕೇಶ್, ನಿಂಗರಾಜ್, ದೀಪಾ, ಕುಸುಮಾ, ವೀಣಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬಡವರಿಗೆ 173 ಎಕರೆ ಬಡಾವಣೆಯಲ್ಲಿ ಮನೆ

**(1ನೇ ಪುಟದಿಂದ)** ಧೀಮಂತ ಗುಣವಿದೆ ಎಂದು ಮುಖ್ಯಮಂತ್ರಿ ಪ್ರಶಂಸಿಸಿದರು.

ಹಸಿಗೋಡೆ ಮೇಲೆ ಹರಳು ಒಗೆದಂತೆ ರವೀಂದ್ರನಾಥ್ ಅವರ ಮಾತುಗಳಿಗೆ ನಾನೂ ಸಾಕ್ಷಿಯಾಗಿದ್ದೇನೆ. 'ಕಳೆದ ಎರಡು ವರ್ಷಗಳಲ್ಲಿ ನಿಮ್ಮ ಮಾತು ಕಡಿಮೆಯಾಯಿತು' ಎಂದು ನಾನು ಅವರ ಬಳಿ ಕೇಳಿದಾಗ, 'ನೀವೆಲ್ಲ ಅಧಿಕಾರಕ್ಕೆ ಬಂದ ಮೇಲೆ ಮಾತು ಕಡಿಮೆಯಾಯಿತು' ಎಂದು ರವೀಂದ್ರನಾಥ್ ಹೇಳಿ, ಅಲ್ಲೂ ತಮ್ಮ ಮಾತಿನ ಹರಿತ ತೋರಿಸಿದರು ಎಂದು ಬೊಮ್ಮಾಯಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಾತನಾಡಿ, ರವೀಂದ್ರನಾಥ್ ಅವರು ಹಲವಾರು ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ಜಿಲ್ಲೆಯಲ್ಲಿ ಬಿಜೆಪಿ ಗೆಲ್ಲಿಸುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ ಎಂದರು.

ಸಂಸದ ಜಿ.ಎ.ಸಿದ್ದೇಶ್ವರ ಮಾತನಾಡಿ, ಭದ್ರಾ ನಾಲೆ ಆಧುನೀಕರಣ, ಜಿಲ್ಲಾಧಿಕಾರಿಗಳ ಕಚೇರಿ ನಿರ್ಮಾಣ, ದಾವಣಗೆರೆಯನ್ನು ಪಾಲಿಕೆಯಾಗಿ ಪರಿವರ್ತಿಸಿದ್ದು, ಪಾಲಿಕೆಗೆ 200 ಕೋಟಿ ರೂ. ಅನುದಾನ, ದಾವಣಗೆರೆ ವಿಶ್ವವಿದ್ಯಾನಿಲಯ ರಚನೆ, ಶಾಲಾ - ಕಾಲೇಜುಗಳ ನಿರ್ಮಾಣದಂತಹ ಕೆಲಸಗಳು ರವೀಂದ್ರನಾಥ್ ಅವರಿಂದ ಆಗಿವೆ ಎಂದರು.

